# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

## ದಿನಾಂಕ:30.11.2024

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007
ದೂರವಾಣಿ ಸಂಖ್ಯೆ: 08192–208029, ಫ್ಯಾಕ್ಸ್ ಸಂಖ್ಯೆ: 08192–208008

ಃ ವಿದ್ಯಾದಾನೇನ ವರ್ಧತೆ, ವಿದ್ಯಾ ವಿನಯೇನ ಶೋಭತೆ, ವಿದ್ಯಯಾ ವಿಂಧತೆ ಅಮಅಮೃತಂ ಃ

**ಸಂಖ್ಯೆ:ದಾವಿವಿ/ಪ್ರಾಧಿಕಾರ/ಸಿಂ/492(ಎ)/2024–25/ 3188** **ದಿನಾಂಕ:05.11.2024**

ಇವರಿಗೆ,

ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ.

ಮಾನ್ಯರೆ,

ವಿಷಯ : ದಿನಾಂಕ:30.11.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು.

ಉಲ್ಲೇಖ : ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:05.12.2024

****

ವಿಶ್ವವಿದ್ಯಾನಿಲಯ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು ಅಧ್ಯಾಯ – III ರ ಪ್ರಕರಣ 16 (i) ರ ರೀತ್ಯ ದಿನಾಂಕ:30.11.2024 ರಂದು ವಿಶ್ವವಿದ್ಯಾನಿಲಯದ ಆಡಳಿತ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಈ ಮೂಲಕ ತಮಗೆ ಕಳುಹಿಸಲಾಗಿದೆ.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ರಡಿ ರಚಿಸಲಾಗಿರುವ ಪ್ರಾಧಿಕಾರಗಳ ನಿರ್ವಹಣೆ ಮತ್ತು ವ್ಯವಹಾರಗಳ ಅಧಿನಿಯಮಗಳು – ಅಧ್ಯಾಯ–III ರ ಪ್ರಕರಣ 16 (i) ರ ರೀತ್ಯ ನಡಾವಳಿ ತಲುಪಿದ ಏಳು **ದಿನಗಳೊಳಗಾಗಿ** ತಮ್ಮಿಂದ ನಡಾವಳಿಗಳ ದಾಖಲಾತಿಯ ಬಗ್ಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ನಡಾವಳಿಗಳ ದಾಖಲಾತಿಯು ಸರಿಯಾಗಿದೆಯೆಂದು ಭಾವಿಸಲಾಗುವುದು.

ತಮ್ಮ ವಿಶ್ವಾಸಿ,

05/12/2024

ಕುಲಸಚಿವರು
ದಾವಣಗೆರೆ ವಿಶ್ವವಿದ್ಯಾನಿಲಯ
ಶಿವಗಂಗೋತ್ರಿ, ದಾವಣಗೆರೆ-577007

**ಪ್ರತಿಗಳು:**

1. ಮಾನ್ಯ ರಾಜ್ಯಪಾಲರ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯಪಾಲರ ಸಚಿವಾಲಯ, ರಾಜಭವನ, ಬೆಂಗಳೂರು–560 001.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು– 560 001.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು), ಬಹುಮಹಡಿಗಳ ಕಟ್ಟಡ, ಬೆಂಗಳೂರು
4. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ನೃಪತುಂಗ ರಸ್ತೆ, ಬೆಂಗಳೂರು.
5. ಎಲ್ಲಾ ಸಿಂಡಿಕೇಟ್ ಸದಸ್ಯರುಗಳಿಗೆ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
6. ಕುಲಸಚಿವರು (ಪರೀಕ್ಷಾಂಗ), ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
7. ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
8. ನಿಕಾಯಗಳ ಡೀನರುಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
9. ಗ್ರಂಥಪಾಲಕರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
10. ಕಾರ್ಯನಿರ್ವಾಹಕ ಇಂಜಿನಿಯರ್, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
11. ಉಪಕುಲಸಚಿವರು, ಶೈಕ್ಷಣಿಕ/ಮಾಸನಿ/ಅಭಿವೃದ್ಧಿ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
12. ನಿರ್ದೇಶಕರು, ಸಿ.ಡಿ.ಸಿ/ಐಕ್ಯೂಎಸಿ/ಪಿ.ಎಂ.ಇ./ದೈಹಿಕ ಶಿಕ್ಷಣ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
13. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ, ದೃಶ್ಯಕಲಾ ಕಾಲೇಜು, ದಾವಣಗೆರೆ–577004
14. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರ, ರಾ.ಹೆ.13, ಗುಡ್ಡದ ರಂಗವ್ವನಹಳ್ಳಿ, ಚಿತ್ರದುರ್ಗ–577502
15. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ತುರುವನೂರು, ಚಿತ್ರದುರ್ಗ–577517
16. ಸಂಯೋಜನಾಧಿಕಾರಿಗಳು, ವಿಶ್ವವಿದ್ಯಾನಿಲಯದ ಸರ್ಕಾರಿ ಪ್ರಥಮ ದರ್ಜೆ ಘಟಕ ಕಾಲೇಜು, ಹರಿಯಬ್ಬೆ, ಚಿತ್ರದುರ್ಗ–577546
17. ಆಪ್ತ ಕಾರ್ಯಾಲಯ, ಮಾನ್ಯ ಕುಲಪತಿಗಳು/ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ.
18. ಕಛೇರಿ ಪ್ರತಿ.

# ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ-577007

## ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:30.11.2024 ರಂದು ಜರುಗಿದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳು

ಸಭೆಯಲ್ಲಿ ಹಾಜರಿದ್ದ ಸದಸ್ಯರು:

1. ಪ್ರೊ. ಬಿ.ಡಿ ಕುಂಬಾರ., ಮಾನ್ಯ ಕುಲಪತಿಗಳು : ಅಧ್ಯಕ್ಷರು
2. ಡಾ. ವಿಷ್ಣುಮೂರ್ತಿ., ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಶಿವಮೊಗ್ಗ : ಸದಸ್ಯರು
3. ಶ್ರೀಮತಿ ಶಾರದಾ ಪಾಟೀಲ., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
4. ಡಾ. ಉಮೇಶ್ ಬಿ. ಎನ್., ಮಾನ್ಯ ರಾಜ್ಯಪಾಲರಿಂದ ನಾಮನಿರ್ದೇಶಿತರು : ಸದಸ್ಯರು
5. ಡಾ. ಕೆ.ಟಿ. ನಾಗರಾಜ ನಾಯ್ಕ., ಪ್ರಾಚಾರ್ಯರು : ಸದಸ್ಯರು
6. ಶ್ರೀ ಬಾಬು ಕುಮಾರ್ ಓ., ಪ್ರಾಚಾರ್ಯರು : ಸದಸ್ಯರು
7. ಡಾ. ಗಿರೀಶ್ ಟಿ., ಪ್ರಾಚಾರ್ಯರು : ಸದಸ್ಯರು
8. ಶ್ರೀಮತಿ ಉಷಾ ಎಸ್., ಆರ್, ಪ್ರಾಚಾರ್ಯರು : ಸದಸ್ಯರು
9. ಶ್ರೀ ದ್ಯಾಮಪ್ಪ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
10. ಶ್ರೀ ತಿಪ್ಪೇಸ್ವಾಮಿ ಹೆಚ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
11. ಡಾ. ಜಿ.ಕೆ. ಪ್ರೇಮ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
12. ಶ್ರೀ ಶಬೀರ್ ಅಲಿಖಾನ್., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
13. ಶ್ರೀ ಪ್ರಶಾಂತ್ ಆರ್.ಟಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
14. ಶ್ರೀ ಪ್ರಶಾಂತ್ ಎನ್.ಸಿ., ಮಾನ್ಯ ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರು : ಸದಸ್ಯರು
15. ಡಾ. ಗೋವಿಂದಪ್ಪ ಎಂ., ಪ್ರಾಧ್ಯಾಪಕರು : ಸದಸ್ಯರು
16. ಡಾ. ರಮೇಶ್ ಸಿ. ಕೆ., ಕುಲಸಚಿವರು (ಪರೀಕ್ಷಾಂಗ) : ಸದಸ್ಯರು
17. ಡಾ. ಮಹಾಬಲೇಶ್ವರ ಯು.ಎಸ್., ಕುಲಸಚಿವರು, ಆಡಳಿತ (ಪ್ರಭಾರೆ) ಹಾಗೂ ಡೀನರು, ವಿಜ್ಞಾನ ನಿಕಾಯ, ದಾವಣಗೆರೆ ವಿಶ್ವವಿದ್ಯಾನಿಲಯ. : ಸದಸ್ಯ ಕಾರ್ಯದರ್ಶಿ

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08 ಕ್ಕಿಂತ ಹೆಚ್ಚು ಅಂದರೆ 17 ಸದಸ್ಯರುಗಳು ಹಾಜರಿರುವುದನ್ನು ಖಚಿತಪಡಿಸಿಕೊಂಡು ನಿಗದಿತ ಸಮಯಕ್ಕೆ ಸರಿಯಾಗಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯದಾಗಿ ಕುಲಸಚಿವರು ಮಾನ್ಯ ಕುಲಪತಿಗಳನ್ನು ಸಭೆಗೆ ಸ್ವಾಗತಿಸಿ ಅಧ್ಯಕ್ಷತೆಯನ್ನು ವಹಿಸುವಂತೆ ಕೋರಿದರು. ತದನಂತರ, ನೂತನವಾಗಿ ಪ್ರಾಂಶುಪಾಲರ ವರ್ಗದಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶಿತರಾಗಿರುವ 1) ಡಾ. ಕೆ.ಟಿ. ನಾಗರಾಜ ನಾಯ್ಕ 2) ಶ್ರೀ ಬಾಬು ಕುಮಾರ್ ಓ., 3) ಡಾ. ಗಿರೀಶ್ ಟಿ., ಹಾಗೂ 4) ಶ್ರೀಮತಿ ಉಷಾ ಎಸ್., ಇವರನ್ನು ಹಾಗೂ ಮಾನ್ಯ ಕರ್ನಾಟಕ ರಾಜ್ಯ ಸರ್ಕಾರದಿಂದ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶಿತರಾಗಿರುವ 1) ಶ್ರೀ ದ್ಯಾಮಪ್ಪ 2) ಶ್ರೀ ತಿಪ್ಪೇಸ್ವಾಮಿ ಹೆಚ್. 3) ಡಾ. ಜಿ. ಕೆ. ಪ್ರೇಮ 4) ಶ್ರೀ ಶಬೀರ್ ಅಲಿಖಾನ್ 5) ಶ್ರೀ ಪ್ರಶಾಂತ್ ಆರ್.ಟಿ. ಹಾಗೂ 6) ಶ್ರೀ ಪ್ರಶಾಂತ್ ಎನ್.ಸಿ. ಇವರುಗಳನ್ನು ಅಭಿನಂದಿಸಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳಿಗೆ ಸ್ವಾಗತವನ್ನು ಕೋರಿದರು. ತದನಂತರ, ಸಭೆಯ ಕಲಾಪಗಳನ್ನು ಈ ಮುಂದಿನಂತೆ ಪ್ರಾರಂಭಿಸಲಾಯಿತು.

ಕುಲಸಚಿವರು

ಕುಲಪತಿಗಳು

| ಪ್ರಾಧಿಕಾರಗಳ ವಿಭಾಗ – 1 | |
|---|---|
| ವಿಷಯ ಸಂಖ್ಯೆ: | ಸಿಂ.01(a)/(11/24) |

## –:ಟಿಪ್ಪಣಿ:–

**ವಿಷಯ: ದಿನಾಂಕ:03.10.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭಾ ನಡಾವಳಿಗಳ ದೃಢೀಕರಣ.**

*****

ದಿನಾಂಕ:03.10.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ದಿನಾಂಕ:14.10.2024 ರಂದು ವಿಶ್ವವಿದ್ಯಾನಿಲಯದ ಮಾನ್ಯ ಸಿಂಡಿಕೇಟ್ ಸದಸ್ಯರುಗಳಿಗೆ ಕಳುಹಿಸಲಾಗಿತ್ತು. ಸದರಿ ನಡಾವಳಿಗಳ ಕುರಿತು ಇದುವರೆಗೂ ಯಾವುದೇ ಆಕ್ಷೇಪಣೆಗಳು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತವಾಗಿರುವುದಿಲ್ಲ. ಆದ್ದರಿಂದ, ಸದರಿ ಸಭೆಯ ನಡಾವಳಿಗಳನ್ನು ದೃಢೀಕರಿಸುವ ಸಂಬಂಧ ದಿನಾಂಕ:30.11.2024 ರಂದು ಏರ್ಪಡಿಸಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ದೃಢೀಕರಣಕ್ಕಾಗಿ ಸಲ್ಲಿಸಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ ದಿನಾಂಕ:03.10.2024 ರಂದು ಏರ್ಪಡಿಸಲಾಗಿದ್ದ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳನ್ನು ಮತ್ತು Action Taken Report ನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ದೃಢೀಕರಿಸಿ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 2 | |
|---|---|
| ವಿಷಯ ಸಂಖ್ಯೆ: | ಸಿಂ.02(a)/(11/24) |

## –: ಟಿಪ್ಪಣಿ :–

ವಿಷಯಃ **INSA Visiting Scientist Programme ನಲ್ಲಿ ಭಾಗವಹಿಸಲು ಅನುಮತಿ ನೀಡುವಂತೆ ಕೋರಿರುವ ಬಗ್ಗೆ.**

ಉಲ್ಲೇಖ: ಪ್ರೊ॥ ಎಂ.ಎನ್. ಕಳಸದ, ಪ್ರಾಧ್ಯಾಪಕರು ಇವರ ಪತ್ರ ಸಂಖ್ಯೆಃ ದಾವಿವಿ/ಭೌವಿ/2024–25/43, ದಿನಾಂಕಃ 27.09.2024

*********

ಪ್ರೊ॥ ಎಂ.ಎನ್. ಕಳಸದ, ಪ್ರಾಧ್ಯಾಪಕರು, ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು "INSA Visiting Scientist Programme" 2024-25 ರ ಪ್ರಶಸ್ತಿಗೆ ಆಯ್ಕೆಗೊಂಡಿದ್ದು, ತಾವು Dr. Aditya Sadhanala, Centre for Nano Science and Engineering (CeNSE), IISc, Bangalore - ಇವರ ಜೊತೆ 2 ತಿಂಗಳ ಅವಧಿಗೆ ಸಂಶೋಧನಾ ಕಾರ್ಯಗಳನ್ನು ನಿರ್ವಹಿಸಲು ಅನುಮತಿ ಹಾಗೂ ಅನ್ಯಕಾರ್ಯ ನಿಮಿತ್ತ (OOD) ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ಕೋರಿರುತ್ತಾರೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಭೌತಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಪ್ರೊ. ಮುತ್ತನಗೌಡ ಎನ್. ಕಳಸದ** ಇವರು ಶೈಕ್ಷಣಿಕ ಉದ್ದೇಶಕ್ಕಾಗಿ Dr. Aditya Sadhanala, Centre for Nano Science and Engineering (CeNSE), IISc, Bangalore - ಇವರ ಜೊತೆ 2 ತಿಂಗಳ ಅವಧಿಗೆ ಸಂಶೋಧನಾ ಕಾರ್ಯಗಳನ್ನು ನಿರ್ವಹಿಸಲು ವಿಶ್ವವಿದ್ಯಾನಿಲಯದ ಮೇಲೆ ಯಾವುದೇ ಹಣಕಾಸು/ ಆರ್ಥಿಕ ಹೊರೆ ಇಲ್ಲದೆ ಹಾಗೂ ಪ್ರತಿ ಶನಿವಾರ ಮತ್ತು ಭಾನುವಾರ ತರಗತಿ ತೆಗೆದುಕೊಳ್ಳುವ ಹಾಗೂ ವಿಶ್ವವಿದ್ಯಾನಿಲಯದ ತುರ್ತು ಕಾರ್ಯಗಳಿದ್ದಾಗ ಕಾರ್ಯನಿರ್ವಹಿಸುವ ಷರತ್ತಿಗೊಳಪಟ್ಟು ಅನ್ಯಕಾರ್ಯ ನಿಮಿತ್ತ (OOD) ರಜೆ ನೀಡಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು

ಕುಲಪತಿಗಳು

| ಮಾ.ಸ.ನಿ. ವಿಭಾಗ – 3 | |
|---|---|
| ವಿಷಯ ಸಂಖ್ಯೆ: | ಸಿಂ.02(b)/(11/24) |

## –ಃ ಟಿಪ್ಪಣಿ ಃ–

**ವಿಷಯಃ ಅತಿಥಿ ಉಪನ್ಯಾಸಕರ ವೇತನ ಪರಿಷ್ಕರಿಸುವ ಕುರಿತು ದಿನಾಂಕಃ06.11.2024ರಂದು ನಡೆದ ವಿವಿಧ ನಿಕಾಯಗಳ ಡೀನರುಗಳ ಸಭೆಯ ನಡಾವಳಿ ಅನುಮೋದನೆ ಕುರಿತು.**

*********

ವಿಶ್ವವಿದ್ಯಾನಿಲಯದಲ್ಲಿ ದಿನಾಂಕಃ06.11.2024ರಂದು ನಡೆದ ವಿವಿಧ ನಿಕಾಯಗಳ ಡೀನರುಗಳ ಸಭೆಯಲ್ಲಿ ಅತಿಥಿ ಉಪನ್ಯಾಸಕರುಗಳ ವೇತನ ಪರಿಷ್ಕರಿಸುವ ಹಾಗೂ ಸ್ನಾತಕ ಪದವಿ ಕೋರ್ಸ್‌ಗಳ ಕುರಿತು ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯ ಹಾಗೂ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಸ್ನಾತಕೋತ್ತರ ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸರುಗಳಿಗೆ ಮಾಸಿಕ ವೇತನ ಪರಿಷ್ಕರಿಸುವ ಕುರಿತು ಹಾಗೂ ಸ್ನಾತಕ ಪದವಿ ಕೋರ್ಸ್‌ಗಳ ಕುರಿತಂತೆ ದಿನಾಂಕ:06.11.2024 ರಂದು ನಡೆದ ಡೀನರ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಲಾದ ಸಭಾ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 4 | |
|---|---|
| ವಿಷಯ ಸಂಖ್ಯೆ: | ಸಿಂ.02(c)/(11/24) |

## –: ಟಿಪ್ಪಣಿ :–

**ವಿಷಯ: ಡಾ. ಪರಮೇಶ ಎಂ., ಪ್ರಾಧ್ಯಾಪಕರು, ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ ಇವರಿಗೆ ಸಂಬಂಧಿಸಿದ ವೈದ್ಯಕೀಯ ವೆಚ್ಚ ರೂ.1,32,320/– ಗಳ ಮರುಭರಿಕೆ ಕುರಿತು.**

ಉಲ್ಲೇಖ: ಡಾ. ಪರಮೇಶ ಎಂ, ಪ್ರಾಧ್ಯಾಪಕರು – ಇವರ ಪತ್ರ ಸಂಖ್ಯೆ: ದಾವಿವಿ/ಆತ/2024–25/506, ದಿನಾಂಕ: 08.11.2024

*********

ಡಾ. ಪರಮೇಶ ಎಂ, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ – ಇವರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು – ಇಲ್ಲಿ ಅವರ ತಾಯಿಯ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ವೆಚ್ಚದ ಒಟ್ಟು ಮೊತ್ತ ರೂ.1,33,092.06/– ಗಳ ಮೂಲ ಬಿಲ್ಲುಗಳನ್ನು ಸಲ್ಲಿಸಿ, ಮರುಭರಿಕೆ ಮಾಡುವಂತೆ ಉಲ್ಲೇಖ (1)ರ ಪತ್ರದಲ್ಲಿ ಕೋರಿರುತ್ತಾರೆ. ಈ ಕುರಿತು **ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳು ರೂ.1,32,320/– ಗಳ ಮರುಭರಿಕೆಗಾಗಿ ಶಿಫಾರಸ್ಸು ನೀಡಿರುತ್ತಾರೆ.**

ಮುಂದುವರೆದು ಉಲ್ಲೇಖ (2)ರ ಮಾನ್ಯ ಕುಲಪತಿಗಳ ಆದೇಶಾನುಸರ ಡಾ. ಪರಮೇಶ ಎಂ, ಪ್ರಾಧ್ಯಾಪಕರು – ಇವರ ವೈದ್ಯಕೀಯ ವೆಚ್ಚದ ಮರುಭರಿಕೆ ಪ್ರಸ್ತಾವನೆಯನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ

### :: ನಿರ್ಣಯ ::

ಡಾ. ಪರಮೇಶ ಎಂ, ಪ್ರಾಧ್ಯಾಪಕರು, ಸ್ನಾತಕೋತ್ತರ ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ – ಇವರು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಮೈಸೂರು – ಇಲ್ಲಿ ಅವರ ತಾಯಿಯ ಅನಾರೋಗ್ಯದ ನಿಮಿತ್ತ ಚಿಕಿತ್ಸೆ ಮಾಡಿಸಿದ ವೈದ್ಯಕೀಯ ವೆಚ್ಚಕ್ಕೆ ಸಂಬಂಧಪಟ್ಟಂತೆ ವಿಶ್ವವಿದ್ಯಾನಿಲಯದ ವೈದ್ಯಾಧಿಕಾರಿಗಳು ಶಿಫಾರಸ್ಸು ಮಾಡಿರುವ **ರೂ.1,32,320/–ಗಳನ್ನು** ಮರುಭರಿಕೆ ಮಾಡಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು                ಕುಲಪತಿಗಳು

| ಮಾ.ಸ.ನಿ. ವಿಭಾಗ – 5 | |
|---|---|
| ವಿಷಯ ಸಂಖ್ಯೆ: | ಸಿಂ.02(d)/(11/24) |

## –: ಟಿಪ್ಪಣಿ :–

ವಿಷಯ: **ಶ್ರೀಮತಿ ಉಮಾದೇವಿ ವಿ., ಉಪಕುಲಸಚಿವರು ವೇತನ ಶ್ರೇಣಿಯನ್ನು ಕಾಲ್ಪನಿಕವೆಂದು ಪರಿಗಣಿಸಿ ಪರಿಷ್ಕರಿಸುವ ಕುರಿತು ದಿನಾಂಕ:06.11.2024ರಂದು ನಡೆದ ಸಭಾ ನಡಾವಳಿಯ ಅನುಮೋದನೆಗಾಗಿ ಮಂಡಿಸಿದೆ.**

ಉಲ್ಲೇಖ: ಸಿಂಡಿಕೇಟ್ ಸಾಮಾನ್ಯ ಸಭೆಯ ದಿನಾಂಕ:03.10.2024

*********

ಉಲ್ಲೇಖ (01)ರ ಸಾಮಾನ್ಯ ಸಿಂಡಿಕೇಟ್ ಸಭೆಯ ನಿರ್ಣಯ ಮತ್ತು ಮಾನ್ಯ ಕುಲಪತಿಗಳ ಆದೇಶಾನುಸಾರ ಶ್ರೀಮತಿ ಉಮಾದೇವಿ ವಿ. ಉಪಕುಲಸಚಿವರು ಆಡಳಿತ ವಿಭಾಗ ಇವರಿಗೆ ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ DPC ಮೂಲಕ ಮುಂಬಡ್ತಿ ನೀಡುವಾಗ ಸರ್ಕಾರದ RPP ಕಾಯ್ದೆ 1978 ರಡಿ ಸ್ವತಂತ್ರ ಪ್ರಭಾರದಡಿ ಸ್ಥಾನಿಕರಿಸಿದ ದಿನಾಂಕದಿಂದಲೇ ಅನ್ವಯಿಸುವಂತೆ ಮುಂಬಡ್ತಿ ನೀಡಿರುವುದರಿಂದ ದಿನಾಂಕ:26.07.2018 ರಿಂದ ದಿನಾಂಕ:24.09.2020 ರವರೆಗೆ ಅವಧಿಯಲ್ಲಿನ ವೇತನವನ್ನು ಕಾಲ್ಪನಿಕವೆಂದು ಪರಿಗಣಿಸುವುದನ್ನು ಪರಿಷ್ಕರಿಸುವ ಕುರಿತಂತೆ ಉಪಸಮಿತಿಯನ್ನು ರಚಿಸಲಾಗಿತ್ತು.

ಮುಂದುವರೆದು, ಉಪಸಮಿತಿಯ ನಿರ್ಣಯನುಸಾರ ವಿಶ್ವವಿದ್ಯಾನಿಲಯವು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ನಿಯಮ 32ರಡಿ ನೀಡಿದ ಬಡ್ತಿಗೆ ಸರ್ಕಾರದ ಅನುಮತಿ ಅಗತ್ಯವಿರುವುದಿಲ್ಲ. ಸಿಂಡಿಕೇಟ್ ಸಭೆಯು ವಿಶ್ವವಿದ್ಯಾನಿಲಯದ ನೇಮಕಾತಿ ಮತ್ತು ಬಡ್ತಿಯನ್ನು ನೀಡುವ ಅಧಿಕಾರವನ್ನು ಹೊಂದಿರುವುದರಿಂದ 06 ತಿಂಗಳಿಗಿಂತ ಹೆಚ್ಚಿನ ಪ್ರಭಾರೆ ವ್ಯವಸ್ಥೆಯ ಮುಂದುವರೆಕೆಗೆ ಘಟನೋತ್ತರವಾಗಿ ಸಿಂಡಿಕೇಟ್ ಅನುಮತಿ ಪಡೆದು ಮೇಲ್ಕಂಡ ಅವಧಿಯಲ್ಲಿ ಪಾವತಿಸಲಾದ ಪ್ರಭಾರೆ ಭತ್ಯೆ ಮೊತ್ತ ರೂ.1,78,500/– ಗಳನ್ನು ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಗೆ ಮತ್ತೊಮ್ಮೆ ಪರಿಷ್ಕೃತ ಅನುಸರಣಾ ವರದಿಯನ್ನು ಸಲ್ಲಿಸಿ, ಸದರಿ ಕಂಡಿಕೆಯನ್ನು ಕೈ ಬಿಡಲು ಕ್ರಮವಹಿಸುವಂತೆ ಸಮಿತಿಯು ತಿರ್ಮಾನಿಸಿರುವ ಹಿನ್ನೆಲೆಯಲ್ಲಿ ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

### :: ನಿರ್ಣಯ ::

ದಿನಾಂಕ:06.11.2024 ರಂದು ನಡೆದ ಸಭಾ ನಡಾವಳಿಯ ನಿರ್ಣಯದಂತೆ ಶ್ರೀಮತಿ ಉಮಾದೇವಿ ವಿ ಇವರಿಗೆ ಕೆ.ಸಿ.ಎಸ್.ಆರ್. ನಿಯಮ 32ರನ್ವಯ ಸ್ವತಂತ್ರ ಪ್ರಭಾರದ ವ್ಯವಸ್ಥೆಯಡಿ ಉಪಕುಲಸಚಿವರು ಹುದ್ದೆಗೆ ನಿಯಮಾನುಸಾರ ಬಡ್ತಿ ನೀಡಲಾಗಿರುತ್ತದೆ. ನ್ಯಾಯಾಲಯದ ಪವಿತ್ರ ಪ್ರಕರಣದ ಹಿನ್ನೆಲೆಯಲ್ಲಿ ಖಾಯಂ ಬಡ್ತಿಗೆ ಕ್ರಮವಹಿಸದೆ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ಹಿತೃಷ್ಟಿಯಿಂದ 06 ತಿಂಗಳಿಗಿಂತ ಹೆಚ್ಚುವರಿಯಾಗಿ ಪ್ರಬಾರೆ ವ್ಯವಸ್ಥೆಯಡಿ ಮುಂದುವರೆಸಿ ಪ್ರಬಾರೆ ಭತ್ಯೆ ರೂ.1,78,500/– ಗಳನ್ನು ಪಾವತಿಸಿರುವುದಕ್ಕೆ ಸಭೆಯು ಘಟನೋತ್ತರವಾಗಿ ಅನುಮೋದಿಸಿತು ಹಾಗೂ ಆಡಿಟ್ ಆಕ್ಷೇಪಣೆಗೊಳಗಾದ ಪ್ರಬಾರ ಭತ್ಯೆ ಮೊತ್ತವನ್ನು ಕೈಬಿಡುವಂತೆ ಲೆಕ್ಕಪರಿಶೋಧನೆಗೆ ಮಂಡಿಸಲು ಮತ್ತು ಲೆಕ್ಕಪತ್ರ ಇಲಾಖೆಗೆ ಪತ್ರಿಸುವಂತೆ ನಿರ್ಣಯಿಸಲಾಯಿತು.

ಕುಲಸಚಿವರು ಕುಲಪತಿಗಳು

| ಮಾ.ಸ.ನಿ. ವಿಭಾಗ – 6 | |
|---|---|
| ವಿಷಯ ಸಂಖ್ಯೆ: | ಸಿಂ.02(e)/(11/24) |

## –: ಟಿಪ್ಪಣಿ :–

ವಿಷಯ: **2016ರ ಪರಿಷ್ಕೃತ ಪಿಂಚಣಿಯ ವ್ಯತ್ಯಾಸದ ಮೊತ್ತ ಪಾವತಿಸುವ ಕುರಿತು.**

ಉಲ್ಲೇಖ: 1. ವಿ.ವಿ. ಪತ್ರ ಸಂಖ್ಯೆ:ದಾವಿವಿ/ಮಾಸನಿ/96/2020–21/58, ದಿನಾಂಕ: 05.04.2021
2. ವಿ.ವಿ. ಪತ್ರ ಸಂಖ್ಯೆ:ದಾವಿವಿ/ಮಾಸನಿ/49/2023–24/287, ದಿನಾಂಕ: 29.04.2023

*********

ವಿಶ್ವವಿದ್ಯಾನಿಲಯದ ಉಲ್ಲೇಖ (1) ಮತ್ತು (2)ರ ಪತ್ರಗಳಲ್ಲಿ ನಿವೃತ್ತಿ ಹೊಂದಿದ ಅಧ್ಯಾಪಕರು/ಆಯ್ಕೆ ಶ್ರೇಣಿ ಸಹಾಯಕ ಗ್ರಂಥಪಾಲಕರ 2016ರ ಪರಿಷ್ಕೃತ ಪಿಂಚಣಿಯ ವ್ಯತ್ಯಾಸದ ಒಟ್ಟು ಮೊತ್ತ ರೂ.17,81,851/– ಗಳ ಅನುದಾನ ಬಿಡುಗಡೆಗಾಗಿ ಸರ್ಕಾರಕ್ಕೆ ಪತ್ರಿಸಲಾಗಿತ್ತು, ಆದರೆ ಇದುವರೆಗೂ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುವುದಿಲ್ಲ. ಮುಂದುವರೆದು ಈ ಕೆಳಕಂಡ ನಿವೃತ್ತ ಅಧ್ಯಾಪಕರು/ಆಯ್ಕೆ ಶ್ರೇಣಿ ಸಹಾಯಕ ಗ್ರಂಥಪಾಲಕರು ಪರಿಷ್ಕೃತ ಪಿಂಚಣಿ ವ್ಯತ್ಯಾಸದ ಮೊತ್ತ ಪಾವತಿಸುವಂತೆ ಹಲವಾರು ಬಾರಿ ಮೌಖಿಕವಾಗಿ ಕೋರಿರುತ್ತಾರೆ.

| ಕ್ರ.ಸಂ. | ಹೆಸರು | ಮೊತ್ತ (ರೂಪಾಯಿಗಳಲ್ಲಿ) |
|---|---|---|
| 01 | ಪ್ರೊ॥ ಬಿ. ಬಕ್ಕಪ್ಪ, ಪ್ರಾಧ್ಯಾಪಕರು | 3,56,238/– |
| 02 | ಪ್ರೊ॥ ಗೋವಿಂದಪ್ಪ ಜಿ.ಟಿ., ಪ್ರಾಧ್ಯಾಪಕರು. | 3,56,238/– |
| 03 | ಶ್ರೀ ಪೂರ್ಣಚಂದ್ರ ಹೆಚ್. ಜೆ., ಆಯ್ಕೆ ಶ್ರೇಣಿ ಸಹಾಯಕ ಗ್ರಂಥಪಾಲಕರು. | 2,68,762/– |
| 04 | ಪ್ರೊ॥ ಮಧುಸೂದನ್ ಬಿ. ಪ್ರಾಧ್ಯಾಪಕರು. | 20,080/– |
| 05 | ಪ್ರೊ॥ ಎನ್.ಕೆ. ಗೌಡ, ಪ್ರಾಧ್ಯಾಪಕರು. | 2,18,141/– |
| | **ಒಟ್ಟು** | **12,19,459/–** |

ತತ್ಸಂಬಂಧ ಸರ್ಕಾರದ ಅನುದಾನಕ್ಕಾಗಿ ಕೋರಲಾದ ಒಟ್ಟು ಮೊತ್ತ ರೂ.17,81,851/–ಗಳಲ್ಲಿ ಮೇಲ್ಕಂಡ ನಿವೃತ್ತ ನೌಕರರುಗಳಿಗೆ ಈಗಾಗಲೇ ಜುಲೈ–2020ರಿಂದ ಮಾರ್ಚ್–2021ರವರೆಗೆ ಆಂತರಿಕ ಸಂಪನ್ಮೂಲದಿಂದ ಪಾವತಿಸಲಾದ ಮೊತ್ತವನ್ನು ಹೊರತುಪಡಿಸಿ ಉಳಿದ ಮೊತ್ತ ರೂ.12,19,459/–ಗಳನ್ನು ಸಂಬಂಧಪಟ್ಟ ನಿವೃತ್ತ ನೌಕರರುಗಳಿಗೆ ಪಾವತಿಸುವ ಬಗ್ಗೆ ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿರುವ ಈ ಮೇಲ್ಕಂಡ ಅಧ್ಯಾಪಕರು/ ಆಯ್ಕೆ ಶ್ರೇಣಿ ಸಹಾಯಕ ಗ್ರಂಥಪಾಲಕರಿಗೆ ಪರಿಷ್ಕೃತ ಪಿಂಚಣಿ **ಮೊತ್ತ ರೂ.12,19,459/–** ಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಸಂಶೋಧನಾ & ಅಭಿವೃದ್ಧಿ ಕೋಶ (ಪಿಹೆಚ್.ಡಿ) – 7 | |
|---|---|
| ವಿಷಯ ಸಂಖ್ಯೆ: | ಸಿಂ.03(a)/(11/24) |

## –: ಟಿಪ್ಪಣಿ :–

ವಿಷಯಃ ಡಾ. ಅನೂಪ್ ರಿತ್ತಿ, ಸಹಾಯಕ ಪ್ರಾಧ್ಯಾಪಕರು, ಗಣಕ ವಿಜ್ಞಾನ ಅಧ್ಯಯನ ವಿಭಾಗ ಇವರಿಗೆ ಸಂಶೋಧನಾ ಮಾರ್ಗದರ್ಶಕರಾಗಿ ಮಾನ್ಯತೆ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಕುರಿತು.

*********

ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾದ ಡಾ. ಅನುಪ್ ರಿತ್ತಿ, ಇವರು ಪಿಹೆಚ್.ಡಿ. ಪದವಿಯನ್ನು ಪಡೆದುಕೊಂಡು ತಮ್ಮನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡುವಂತೆ ವಿಶ್ವವಿದ್ಯಾನಿಲಯದ ನಿಯಮಾನುಸಾರ ಮನವಿ ಸಲ್ಲಿಸಿದ್ದರ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಗಳ ಅನುಮೋದನೆಯಂತೆ 2024–25ನೇ ಸಾಲಿನಿಂದ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಲಾಗಿದೆ. ಆದ್ದರಿಂದ ಸದರಿ ವಿಷಯವನ್ನು ದಿನಾಂಕಃ30.11.2024 ರಂದು ನಡೆಯಲಿರುವ ಮಾನ್ಯ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗದಲ್ಲಿ ಸಂಶೋಧನೆಯನ್ನು ಮುಂದುವರೆಸಲು ಅನುಕೂಲವಾಗುವಂತೆ ಡಾಕ್ಟರೇಟ್ (ಪಿ.ಹೆಚ್.ಡಿ) ಪದವಿ ಪಡೆದಿರುವ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಅನುಪ್ ರಿತ್ತಿ, ಸ್ನಾತಕೋತ್ತರ ಗಣಕ ವಿಜ್ಞಾನ ಅಧ್ಯಯನ ವಿಭಾಗ ಇವರನ್ನು ಸಂಶೋಧನಾ ಮಾರ್ಗದರ್ಶಕರನ್ನಾಗಿ ಮಾನ್ಯತೆ ನೀಡಿರುವುದನ್ನು ಸಭೆಯು ಘಟನೋತ್ತರವಾಗಿ ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಐ.ಕ್ಯೂ.ಎ.ಸಿ (IQAC) ವಿಭಾಗ -8 | |
|---|---|
| ವಿಷಯ ಸಂಖ್ಯೆ: | ಸಿಂ.04(a)/(11/24) |

## -: ಟಿಪ್ಪಣಿ :-

ವಿಷಯಃ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ (AAA) ಸಮಿತಿಯ ಖರ್ಚು-ವೆಚ್ಚಗಳನ್ನು ಭರಿಸಲು ಅನುಮೋದನೆ ನೀಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ 2023-24ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ Academic and Administrative Audit (AAA) ಸಮಿತಿಯು ಡಿಸೆಂಬರ್ 2024ರ ಮಾಹೆಯಲ್ಲಿ ಮೌಲ್ಯಮಾಪನ ನಡೆಸಲು ಭೇಟಿ ನೀಡುತ್ತಿರುವುದರಿಂದ ಸದರಿ ಸಮಿತಿಗೆ ಖರ್ಚು-ವೆಚ್ಚಗಳನ್ನು ಭರಿಸಬೇಕಾಗಿರುತ್ತದೆ. ಆದ್ದರಿಂದ, ಈ ಕೆಳಕಂಡ ಅಂದಾಜು ಖರ್ಚು-ವೆಚ್ಚಗಳನ್ನು ಪಾವತಿಸಲು ದಿನಾಂಕ:30.11.2024ರ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗೆ ಸಲ್ಲಿಸಲಾಗಿದೆ.

| ಕ್ರ.ಸಂ. | ವಿಷಯ | ಖರ್ಚು ವೆಚ್ಚ |
|---|---|---|
| 1 | ಪ್ರಯಾಣ ಭತ್ಯೆ, ದಿನಭತ್ಯೆ | 1,00,000/- |
| 2 | ಅತಿಥ್ಯ ವೆಚ್ಚ | 1,00,000/- |
| 3 | ವಾಹನ ಸೌಲಭ್ಯ | 50,000/- |
| 4 | ಇತರೆ | 50,000/- |
| | ಒಟ್ಟು: | 3,00,000/- |

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ 2023-24ನೇ ಸಾಲಿನ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಲೆಕ್ಕ ಪರಿಶೋಧನೆ Academic and Administrative Audit (AAA) ಸಮಿತಿಯು ಡಿಸೆಂಬರ್ 2024ರ ಮಾಹೆಯಲ್ಲಿ ಮೌಲ್ಯಮಾಪನ ನಡೆಸಲು ಭೇಟಿ ನೀಡುತ್ತಿರುವುದರಿಂದ ಸದರಿ ಸಮಿತಿಗೆ ಈ ಮೇಲ್ಕಂಡ ಖರ್ಚು-ವೆಚ್ಚಗಳಿಗಾಗಿ ರೂ.3.00 ಲಕ್ಷಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 9 | |
|---|---|
| ವಿಷಯ ಸಂಖ್ಯೆ: | ಸಿಂ.05(a)/(11/24) |

## –: ಟಿಪ್ಪಣಿ :–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಹೊಸ ವಿಜ್ಞಾನ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಸಂಶೋಧನಾ ಪ್ರಯೋಗಾಲಯಗಳನ್ನು (Phase-1) ನಿರ್ಮಾಣ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಅಧ್ಯಾಪಕ ಸಿಬ್ಬಂದಿಗೆ ಸಂಶೋಧನೆ ಕೈಗೊಳ್ಳಲು ಹಾಗೂ ಸರ್ಕಾರದಿಂದ ಅಧ್ಯಾಪಕ ಸಿಬ್ಬಂದಿಗಳು ಸಂಶೋಧನೆಗೆ ಅನುದಾನ ತರುತ್ತಿದ್ದು ಅವರಿಗೆ ಅಗತ್ಯವಾದ ಪ್ರಯೋಗಾಲಯಗಳನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಹೊಸ ವಿಜ್ಞಾನ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಸಂಶೋಧನಾ ಪ್ರಯೋಗಾಲಯಗಳನ್ನು (Phase-I) ನಿರ್ಮಾಣ ಮಾಡಲು ಅಂದಾಜು ಮೊತ್ತ ರೂ.200.00 ಲಕ್ಷ ಮಿತಿಯೊಳಗೆ ಸರ್ಕಾರದ ನೊಂದಾಯಿತ ಸಂಸ್ಥೆಯಿಂದ ಕೈಗೊಳ್ಳಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅಧ್ಯಾಪಕ ಸಿಬ್ಬಂದಿಗಳಿಗೆ ಸಂಶೋಧನೆ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಹೊಸ ವಿಜ್ಞಾನ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಸಂಶೋಧನಾ ಪ್ರಯೋಗಾಲಯಗಳನ್ನು (Phase-I) ಮುಂಗಡ ಠೇವಣಿ ವಂತಿಕೆ ಆಧಾರದ ಮೇಲೆ ಅಂದಾಜು ಮೊತ್ತ ರೂ.200.00 ಲಕ್ಷದ ಮಿತಿಯೊಳಗೆ ಸರ್ಕಾರದ ನೊಂದಾಯಿತ ಸಂಸ್ಥೆಯಿಂದ ಕಾಮಗಾರಿ ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು                ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 10 | |
|---|---|
| ವಿಷಯ ಸಂಖ್ಯೆ: | ಸಿಂ.05(b)/(11/24) |

# –ಃ ಟಿಪ್ಪಣಿ ಃ–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ Street Light ಗಳನ್ನು ಅಳವಡಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಇದುವರೆಗೂ Solar Street Light ಗಳು ಇರುವುದಿಲ್ಲ ವಿಶ್ವವಿದ್ಯಾನಿಲಯವು ಗ್ರಾಮೀಣ ಭಾಗದಲ್ಲಿ ಇರುವುದರಿಂದ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ Solar Street Light ಗಳನ್ನು ಅಳವಡಿಸುವ ಅವಶ್ಯಕತೆ ಇದ್ದು ಇದನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣವು ಗ್ರಾಮೀಣ ಪ್ರದೇಶದ ಭಾಗದಲ್ಲಿರುವುದರಿಂದ ಹಾಗೂ ಪದೇ ಪದೇ ವಿದ್ಯುತ್ ವ್ಯತ್ಯಯವಾಗುತ್ತಿರುವುದರಿಂದ ವಿಶ್ವವಿದ್ಯಾನಿಲಯದ ಆವರಣದಲ್ಲಿ Solar Street Light ಗಳನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಹಣಕಾಸಿನ ಲಭ್ಯತೆ ನೋಡಿಕೊಂಡು ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 11 | |
|---|---|
| ವಿಷಯ ಸಂಖ್ಯೆ: | ಸಿಂ.05(c)/(11/24) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಶೈಕ್ಷಣಿಕ ಕಟ್ಟಡಗಳಿಗೆ CCTV ಗಳನ್ನು ಅಳವಡಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ MBA, Bio-Science, Social Science & Science ಕಟ್ಟಡಗಳಿಗೆ CCTV ಗಳು ಇರುವುದಿಲ್ಲ. ಆದ್ದರಿಂದ ಸುರಕ್ಷತೆ ದೃಷ್ಟಿಯಿಂದ CCTV ಗಳನ್ನು ಅಳವಡಿಸುವ ಅವಶ್ಯಕತೆ ಇದ್ದು ಇದನ್ನು ತುಂಡುಗುತ್ತಿಗೆ/ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದ MBA, Bio-Science, Social Science & Science ಕಟ್ಟಡಗಳಿಗೆ ಸುರಕ್ಷತೆ ದೃಷ್ಟಿಯಿಂದ CCTV ಗಳನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 12 | |
|---|---|
| ವಿಷಯ ಸಂಖ್ಯೆ: | ಸಿಂ.05(d)/(11/24) |

## –: ಟಿಪ್ಪಣಿ :–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಕುಲಸಚಿವರು (ಪರೀಕ್ಷಾಂಗ) ಇವರ ಆಡಳಿತ ಕಛೇರಿಯಲ್ಲಿ **Strong Room** ನಿರ್ಮಾಣ ಮಾಡಿರುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕುಲಸಚಿವರು (ಪರೀಕ್ಷಾಂಗ) ಇವರ ಆಡಳಿತ ಕಛೇರಿಯಲ್ಲಿ Strong Room ನಿರ್ಮಾಣ ಮಾಡಲು ಗೋಡೆ Steel Grill, Steel Door ಗಳನ್ನು ನಿರ್ಮಾಣ ಮಾಡಲಾಗಿದ್ದು ಈ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ಕೈಗೊಂಡಿದ್ದು ಅವರಿಗೆ ರೂ.3.00 ಲಕ್ಷ (ರೂಪಾಯಿ ಮೂರು ಲಕ್ಷ) ಗಳನ್ನು ಪಾವತಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದಲ್ಲಿ Strong Room ನಿರ್ಮಾಣ ಮಾಡಲು ಗೋಡೆಗೆ Steel Grill, Steel Door ಗಳ ಕಾಮಗಾರಿಯನ್ನು ದರಪಟ್ಟಿ ಆಧಾರದ ಮೇಲೆ ಕೈಗೊಂಡಿದ್ದು ಇದರ ಮೊತ್ತ ರೂ.3.00 ಲಕ್ಷ (ರೂಪಾಯಿ ಮೂರು ಲಕ್ಷ) ಗಳನ್ನು ಶ್ರೀ ಆರ್. ಸೂರ್ಯನಾಯ್ಕ್, ಗುತ್ತಿಗೆದಾರರು, ತೋಳಹುಣಸೆ ಇವರಿಗೆ ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 13 | |
|---|---|
| ವಿಷಯ ಸಂಖ್ಯೆ: | ಸಿಂ.05(e)/(11/24) |

## –: ಟಿಪ್ಪಣಿ :–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಪರೀಕ್ಷಾಂಗ ವಿಭಾಗದಲ್ಲಿ **IP Camera Set Commercial Display** ಗಳನ್ನು ಅಳವಡಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಪರೀಕ್ಷಾಂಗ ವಿಭಾಗದಲ್ಲಿ ಸುರಕ್ಷತೆ ದೃಷ್ಟಿಯಿಂದ IP Camera Set Commercial Display ಗಳನ್ನು ತುರ್ತಾಗಿ ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ **ರೂ. 4,83,422/–** ರೂ. ಗಳ ಮಿತಿಯೊಳಗೆ ಖರೀದಿಸಿ ಅಳವಡಿಸುವ ಕಾಮಗಾರಿ ನಿರ್ವಹಿಸಿರುವ ವಿಷಯವನ್ನು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಪರೀಕ್ಷಾಂಗ ವಿಭಾಗದಲ್ಲಿ ಸುರಕ್ಷತೆ ದೃಷ್ಟಿಯಿಂದ IP Camera Set Commercial Display ಗಳನ್ನು ತುರ್ತಾಗಿ ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕಾಮಗಾರಿಯನ್ನು ನಿರ್ವಹಿಸಿದ್ದು **ರೂ.4,83,422/–** ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 14 | |
|---|---|
| ವಿಷಯ ಸಂಖ್ಯೆ: | ಸಿಂ.05(f)/(11/24) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಪರೀಕ್ಷಾಂಗ ವಿಭಾಗದಿಂದ ಜ್ಞಾನಸೌಧ ಕಟ್ಟಡದಲ್ಲಿರುವ ಪರೀಕ್ಷಾಂಗ ವಿಭಾಗದ ಕೇಂದ್ರಗಳಿಗೆ OFC Cable ನ್ನು ಅಳವಡಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಆಡಳಿತ ಭವನದ ಪರೀಕ್ಷಾಂಗ ವಿಭಾಗದಿಂದ ಜ್ಞಾನಸೌಧ ಕಟ್ಟಡದಲ್ಲಿರುವ ಪರೀಕ್ಷಾಂಗ ವಿಭಾಗಕ್ಕೆ OFC Cable, Laying Commission ಕೆಲಸವನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ **ರೂ.4,75,000/–** ರೂ. ಗಳ ಮಿತಿಯೊಳಗೆ ಖರೀದಿಸಿ ಅಳವಡಿಸುವ ಕಾಮಗಾರಿ ನಿರ್ವಹಿಸಿದ್ದು ಸದರಿ ವಿಷಯವನ್ನು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಆಡಳಿತ ಭವನದ ಪರೀಕ್ಷಾಂಗ ವಿಭಾಗದಿಂದ ಜ್ಞಾನಸೌಧ ಕಟ್ಟಡದಲ್ಲಿರುವ ಪರೀಕ್ಷಾಂಗ ವಿಭಾಗಕ್ಕೆ OFC Cable, Laying Commission ಕೆಲಸವನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕಾಮಗಾರಿಯನ್ನು ನಿರ್ವಹಿಸಿದ್ದು **ರೂ.4,75,000/–** ಗಳನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 15 | |
|---|---|
| ವಿಷಯ ಸಂಖ್ಯೆ: | ಸಿಂ.05(g)/(11/24 |

## –: ಟಿಪ್ಪಣಿ :–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ S.S. Auditorium, ಕೆಫೆಟೆರಿಯಾ ಕಟ್ಟಡ, ಹಳೇ ಕ್ಯಾಂಟೀನ್ ಕಟ್ಟಡ ಹಾಗೂ ಅಧ್ಯಾಪಕ & ಅಧ್ಯಾಪಕೇತರ ವಸತಿ ಗೃಹಗಳಿಗೆ ವಿದ್ಯುತ್ ಸರಬರಾಜು ಮಾಡುವ Main Power Distribution Board ಖರೀದಿಸಿ ಅಳವಡಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ S.S. Auditorium, ಕೆಫೆಟೆರಿಯಾ ಕಟ್ಟಡ, ಹಳೇ ಕ್ಯಾಂಟೀನ ಕಟ್ಟಡ ಹಾಗೂ ಅಧ್ಯಾಪಕ & ಅಧ್ಯಾಪಕೇತರ ವಸತಿ ಗೃಹಗಳಿಗೆ ವಿದ್ಯುತ ಸರಬರಾಜು ಮಾಡುವ Main Power Distribution Board 25 ವರ್ಷಗಳಷ್ಟು ಹಳೆಯದಾಗಿದ್ದು ಸಂಪೂರ್ಣ ಹಾಳಾಗಿರುತ್ತದೆ. ಆದ್ದರಿಂದ, ಹೊಸದಾಗಿ ಖರೀದಿಸಿ ಅಳವಡಿಸುವ ಅವಶ್ಯಕತೆ ಇದ್ದು ಇದನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ **ರೂ.5.00 ಲಕ್ಷ** ಮಿತಿಯೊಳಗೆ ಖರೀದಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ S.S. Auditorium, ಕೆಫೆಟೆರಿಯಾ ಕಟ್ಟಡ, ಹಳೇ ಕ್ಯಾಂಟೀನ್ ಕಟ್ಟಡ ಹಾಗೂ ಅಧ್ಯಾಪಕ & ಅಧ್ಯಾಪಕೇತರ ವಸತಿ ಗೃಹಗಳಿಗೆ ವಿದ್ಯುತ್ ಸರಬರಾಜು ಮಾಡುವ Main Power Distribution Board ನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 16 | |
| --- | --- |
| ವಿಷಯ ಸಂಖ್ಯೆ: | ಸಿಂ.05(h)/(11/24 |

## –: ಟಿಪ್ಪಣಿ :–

**ವಿಷಯ:** ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಇಂಜಿನಿಯರಿಂಗ್ ವಿಭಾಗಕ್ಕೆ **Aluminium Ladder** ಗಳನ್ನು ಖರೀದಿಸುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಕಟ್ಟಡಗಳ ನಿರ್ವಹಣೆ, ಮತ್ತು ತುರ್ತು ಕೆಲಸಗಳಿಗೆ ಅವಶ್ಯಕತೆ ಇದ್ದು 35 ಅಡಿ ಎತ್ತರದ Aluminium Ladder ನ್ನು ಹೊಸದಾಗಿ ಖರೀದಿಸುವ ಅವಶ್ಯಕತೆ ಇದ್ದು ಇದನ್ನು ದರಪಟ್ಟಿಗಳ ಆಧಾರದ ಮೇಲೆ **ರೂ.2.50** ಲಕ್ಷ ಮಿತಿಯೊಳಗೆ ಖರೀದಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಕಟ್ಟಡಗಳ ನಿರ್ವಹಣೆ, ಮತ್ತು ತುರ್ತು ಕೆಲಸಗಳಿಗೆ ಅವಶ್ಯವಿರುವ 35 ಅಡಿ ಎತ್ತರದ Aluminium Ladder ನ್ನು ದರಪಟ್ಟಿಗಳ ಆಧಾರದ ಮೇಲೆ ರೂ.2.50 ಲಕ್ಷ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 17 | |
|---|---|
| ವಿಷಯ ಸಂಖ್ಯೆ: | ಸಿಂ.05(i)/(11/24) |

## –: ಟಿಪ್ಪಣಿ :–

ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವೈಜ್ಞಾನಿಕ ಉಪಕರಣಗಳ ಕೇಂದ್ರ **(USIC)** ಕ್ಕೆ ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ವೈಜ್ಞಾನಿಕ ಉಪಕರಣಗಳ ಕೇಂದ್ರ (University Science Instrumentation Centre - USIC) ಕಟ್ಟಡವನ್ನು (Phase-I) ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ **ರೂ.200.00 ಲಕ್ಷ** ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಕೈಗೊಳ್ಳಲು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ವೈಜ್ಞಾನಿಕ ಉಪಕರಣಗಳ ಕೇಂದ್ರ (University Science Instrumentation Centre - USIC) ಕಟ್ಟಡವನ್ನು (Phase-I) ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.200.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 18 | |
|---|---|
| ವಿಷಯ ಸಂಖ್ಯೆ: | ಸಿಂ.05(j)/(11/24) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ಜ್ಞಾನಸೌಧ ಕಟ್ಟಡಕ್ಕೆ ಮೇಲ್ಛಾವಣಿಯ Truss Roof ನ್ನು ನಿರ್ಮಾಣ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿ ಜ್ಞಾನಸೌಧ ಕಟ್ಟಡದ ಮೇಲ್ಭಾಗದಲ್ಲಿ ಮೇಲ್ಛಾವಣಿಯ (Truss Roof) ನ್ನು ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.200.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಕೈಗೊಳ್ಳಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿ ಜ್ಞಾನಸೌಧ ಕಟ್ಟಡದ ಮೇಲ್ಭಾಗದ ಮೇಲ್ಛಾವಣಿಯ (Truss Roof) ನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.200.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ E-Tender ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 19 | |
|---|---|
| ವಿಷಯ ಸಂಖ್ಯೆ: | ಸಿಂ.05(k)/(11/24 |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕಟ್ಟಡದ ಮಧ್ಯದಲ್ಲಿ ಸಿ.ಸಿ.ರಸ್ತೆ (C.C.Road) ನಿರ್ಮಾಣ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿರುವ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕಟ್ಟಡದ ಮಧ್ಯಭಾಗದಲ್ಲಿ ಮಣ್ಣಿನ ರಸ್ತೆಯಿದ್ದು ಅದನ್ನು ಹೊಸದಾಗಿ ಸಿ.ಸಿ.ರಸ್ತೆ (C.C.Road) ನಿರ್ಮಾಣ ಮಾಡುವ ಅವಶ್ಯಕತೆ ಇದ್ದು ಈ ಕಾಮಗಾರಿಯನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.12.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಕೈಗೊಳ್ಳಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿರುವ ವಿಜ್ಞಾನ ಮತ್ತು ಸಮಾಜ ವಿಜ್ಞಾನ ಕಟ್ಟಡದ ಮಧ್ಯಭಾಗದಲ್ಲಿ ಮಣ್ಣಿನ ರಸ್ತೆಯ ಬದಲಾಗಿ ಸಿ.ಸಿ.ರಸ್ತೆ (C.C.Road) ನ್ನು ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.12.00 ಲಕ್ಷ ಮಿತಿಯೊಳಗೆ ಸರ್ಕಾರಿ ಸಂಸ್ಥೆಯ ಮುಖಾಂತರ ಕಾಮಗಾರಿಯನ್ನು ಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 20 | |
|---|---|
| ವಿಷಯ ಸಂಖ್ಯೆ: | ಸಿಂ.05(1)/(11/24) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿನ ಪುರುಷ & ಮಹಿಳಾ ವಸತಿ ನಿಲಯಗಳಿಗೆ ಹೆಸರುಗಳನ್ನು ಬರೆಸಲು ಅನುಮತಿ ನೀಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿನ ಪುರುಷ ಮತ್ತು ಮಹಿಳಾ ವಸತಿ ನಿಲಯಗಳಿಗೆ ಹೆಸರುಗಳನ್ನು ಬರೆಸಲು ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಇವರು ಕೋರಿದ್ದು ಹೆಸರುಗಳನ್ನು ಸೂಚಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿನ ಪುರುಷ ವಸತಿನಿಲಯಕ್ಕೆ **'ಮದಕರಿ ನಾಯಕ ಪುರುಷ ವಸತಿ ನಿಲಯ'** ವೆಂದು ಹಾಗೂ ಮಹಿಳಾ ವಸತಿ ನಿಲಯಕ್ಕೆ **'ಒನಕೆ ಓಬವ್ವ ಮಹಿಳಾ ವಸತಿ ನಿಲಯ'** ವೆಂದು ನಾಮಕರಣ ಮಾಡಿ ಹೆಸರುಗಳನ್ನು ಬರೆಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 21 | |
|---|---|
| ವಿಷಯ ಸಂಖ್ಯೆ: | ಸಿಂ.05(m)/(11/24) |

## –: ಟಿಪ್ಪಣಿ :–

ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಆವರಣದಲ್ಲಿನ ಮಹಿಳಾ ವಸತಿ ನಿಲಯದಲ್ಲಿ ಕೆಲಸ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳಿಗೆ ಒಂದು ಕೊಠಡಿಯನ್ನು ನಿರ್ಮಿಸಿ ಕೊಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿನ ಮಹಿಳಾ ವಸತಿ ನಿಲಯದಲ್ಲಿ ಕಾರ್ಯನಿರ್ವಹಿಸುವ ಸೆಕ್ಯೂರಿಟಿ ಗಾರ್ಡ್ (Security Guard) ಗಳಿಗೆ ಒಂದು ಕೊಠಡಿಯನ್ನು ನಿರ್ಮಿಸಲು – ನಿರ್ದೇಶಕರು ಸ್ನಾತಕೋತ್ತರ ಕೇಂದ್ರ, ಚಿತ್ರದುರ್ಗ ಇವರು ಕೋರಿರುತ್ತಾರೆ. ಆದ್ದರಿಂದ, ಒಂದು ಕೊಠಡಿಯನ್ನು ನಿರ್ಮಿಸುವ ಅವಶ್ಯಕತೆ ಇದ್ದು ಇದನ್ನು ನೊಂದಾಯಿತ ಸರ್ಕಾರಿ ಸಂಸ್ಥೆಯ ಮುಖಾಂತರ ಮುಂಗಡ ಠೇವಣಿ ವಂತಿಗೆ ಆಧಾರದ ಮೇಲೆ ರೂ.5.00 ಲಕ್ಷದ ಮಿತಿಯೊಳಗೆ ಕೈಗೊಳ್ಳಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಸದರಿ ವಿಷಯವನ್ನು ಮುಂದೂಡಲಾಯಿತು.

ಕುಲಸಚಿವರು | ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 22 | |
|---|---|
| ವಿಷಯ ಸಂಖ್ಯೆ: | ಸಿಂ.05(n)/(11/24) |

## –: ಟಿಪ್ಪಣಿ :–

**ವಿಷಯಃ ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಆವರಣದಲ್ಲಿ ವೈ–ಫೈ (Wi-Fi) ಇಂಟರ್‌ನೆಟ್ ಸಂಪರ್ಕ ಕಲ್ಪಿಸಿಕೊಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ – ಇಲ್ಲಿ ವೈ–ಫೈ (Wi-Fi) ಇಂಟರ್‌ನೆಟ್ ಸಂಪರ್ಕ ಇಲ್ಲದೇ ಇರುವುದರಿಂದ ಹೊಸದಾಗಿ ವೈ–ಫೈ (Wi-Fi) ಇಂಟರ್‌ನೆಟ್ ಸಂಪರ್ಕ ಕಲ್ಪಿಸಿಕೊಡುವಂತೆ ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಇವರು ಕೋರಿರುತ್ತಾರೆ. ಆದ್ದರಿಂದ, 100 Mbps Internet Leased Line Service ಪಡೆಯುವ ಅವಶ್ಯಕತೆ ಇದ್ದು ಇದನ್ನು **ರೂ.5.00 ಲಕ್ಷದ ಮಿತಿಯೊಳಗೆ** ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ಕೈಗೊಳ್ಳಲು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿ – ವೈ–ಫೈ (Wi-Fi) ಸಂಪರ್ಕ ಇಲ್ಲದಿರುವುದರಿಂದ ಹೊಸದಾಗಿ 100 Mbps Internet Leased Line Service ನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷದ ಮಿತಿಯೊಳಗೆ ಅಳವಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 23 | |
|---|---|
| ವಿಷಯ ಸಂಖ್ಯೆ: | ಸಿಂ.05(೦)/(11/24) |

## –: ಟಿಪ್ಪಣಿ :–

**ವಿಷಯ:** **ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಆವರಣದಲ್ಲಿರುವ ಪುರುಷ ಮತ್ತು ಮಹಿಳಾ ವಸತಿ ನಿಲಯಗಳಲ್ಲಿ ಸೋಲಾರ್ ಲೈಟ್ (Solar Light)ಗಳನ್ನು ಅಳವಡಿಸುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯ ವ್ಯಾಪ್ತಿಗೆ ಬರುವ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದಲ್ಲಿ ಆವರಣದಲ್ಲಿರುವ ಪುರುಷ ಮತ್ತು ಮಹಿಳಾ ವಸತಿ ನಿಲಯಗಳಲ್ಲಿ ಸೋಲಾರ್ ಲೈಟ್‌ಗಳನ್ನು (Solar Light) ಅಳವಡಿಸುವಂತೆ ನಿರ್ದೇಶಕರು, ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗ ಇವರು ಕೋರಿರುತ್ತಾರೆ. ಆದ್ದರಿಂದ, ಸೋಲಾರ ಲೇಟ್ (Solar Light)ಗಳನ್ನು ಅಳವಡಿಸುವ ಅವಶ್ಯಕತೆ ಇದ್ದು ಇದನ್ನು ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ **ರೂ.5.00 ಲಕ್ಷದ ಮಿತಿಯೊಳಗೆ** ಖರೀದಿಸಿ ಅಳವಡಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ ಚಿತ್ರದುರ್ಗದ ಆವರಣದಲ್ಲಿರುವ ಪುರುಷ ಮತ್ತು ಮಹಿಳಾ ವಸತಿ ನಿಲಯಗಳಿಗೆ ಅವಶ್ಯವಿರುವ ಸೋಲಾರ್ ಲೈಟ್‌ಗಳನ್ನು (Solar Light) ತುಂಡುಗುತ್ತಿಗೆ/ ದರಪಟ್ಟಿಗಳ ಆಧಾರದ ಮೇಲೆ ರೂ.5.00 ಲಕ್ಷದ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 24 | |
|---|---|
| ವಿಷಯ ಸಂಖ್ಯೆ: | ಸಿಂ.05(p)/(11/24) |

## –: ಟಿಪ್ಪಣಿ :–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ VIP & VVIP ಕೊಠಡಿಗಳಿಗೆ Furniture ಗಳನ್ನು ಖರೀದಿ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅತಿಥಿ ಗೃಹದಲ್ಲಿರುವ ಕೊಠಡಿಗಳು ಉದ್ಘಾಟನೆ ಆಗಿ 07 ವರ್ಷಗಳಾದರು ಉಪಯೋಗಿಸುತ್ತಿರುವುದಿಲ್ಲ ಈಗ ಕೇವಲ 01 VIP & 01 VVIP ಕೊಠಡಿಗಳು ಸಿದ್ದವಾಗಿದ್ದು ಉಳಿದವುಗಳಿಗೆ Furniture ಗಳನ್ನು ಖರೀದಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ, ಅನುದಾನದ ಲಭ್ಯತೆಯ ಮೇರೆಗೆ ದರಪಟ್ಟಿ ಆಧಾರದ ಮೇಲೆ ಮೂರು (03) ಕೊಠಡಿಗಳಿಗೆ Furniture ಗಳನ್ನು ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅತಿಥಿ ಗೃಹದಲ್ಲಿರುವ 03 ಕೊಠಡಿಗಳಿಗೆ ವಿಶ್ವವಿದ್ಯಾನಿಲಯದ 12ನೇ ಘಟಿಕೋತ್ಸವದ ಮುಂಚಿತವಾಗಿ Furniture ಗಳನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು          ಕುಲಪತಿಗಳು

| ಇಂಜಿನಿಯರಿಂಗ್ ವಿಭಾಗ – 25 | |
|---|---|
| ವಿಷಯ ಸಂಖ್ಯೆ: | ಸಿಂ.05(q)/(11/24) |

## –: ಟಿಪ್ಪಣಿ :–

ವಿಷಯಃ **ದಾವಣಗೆರೆ ವಿಶ್ವವಿದ್ಯಾನಿಲಯ ಶಿವಗಂಗೋತ್ರಿ ಆವರಣದಲ್ಲಿನ VIP & VVIP ಕೊಠಡಿಗಳಿಗೆ Mattress Home Furnishing ಗಳನ್ನು ಖರೀದಿ ಮಾಡುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅತಿಥಿ ಗೃಹದಲ್ಲಿರುವ ಕೊಠಡಿಗಳು ಉದ್ಘಾಟನೆ ಆಗಿ 07 ವರ್ಷಗಳಾದರು ಉಪಯೋಗಿಸುತ್ತಿರುವುದಿಲ್ಲ ಈಗ ಕೇವಲ 01 VIP & 01 VVIP ಕೊಠಡಿಗಳು ಸಿದ್ದವಾಗಿದ್ದು ಉಳಿದವುಗಳಿಗೆ Mattress Home Furnishing ಗಳನ್ನು ಖರೀದಿಸುವ ಅವಶ್ಯಕತೆ ಇರುತ್ತದೆ. ಆದ್ದರಿಂದ, ಅನುದಾನದ ಲಭ್ಯತೆಯ ಮೇರೆಗೆ ದರಪಟ್ಟಿ ಆಧಾರದ ಮೇಲೆ ಮೂರು ಕೊಠಡಿಗಳಿಗೆ Mattress Home Furnishing ಗಳನ್ನು ರೂ.5.00 ಲಕ್ಷದ ಮಿತಿಯೊಳಗೆ ಖರೀದಿಸಲು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಶಿವಗಂಗೋತ್ರಿ ಆವರಣದಲ್ಲಿನ ಅತಿಥಿ ಗೃಹದಲ್ಲಿರುವ 03 ಕೊಠಡಿಗಳಿಗೆ ವಿಶ್ವವಿದ್ಯಾನಿಲಯದ 12ನೇ ಘಟಿಕೋತ್ಸವದ ಮುಂಚಿತವಾಗಿ Mattress Home Furnishing ಗಳನ್ನು ದರಪಟ್ಟಿ ಆಧಾರದ ಮೇಲೆ ರೂ.5.00 ಲಕ್ಷ ಮಿತಿಯೊಳಗೆ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಪರೀಕ್ಷಾಂಗ ವಿಭಾಗ – 26 | |
|---|---|
| ವಿಷಯ ಸಂಖ್ಯೆ: | ಸಿಂ.06(a)/(11/24 |

## –: ಟಿಪ್ಪಣಿ :–

ವಿಷಯ: ಖಾಲಿ ಉತ್ತರ ಪತ್ರಿಕೆಗಳನ್ನು ಮುದ್ರಿಸುವ ಸಂಬಂಧ (ಇ–ಪೋರ್ಟಲ್‌ನಲ್ಲಿ) ಟೆಂಡರ್ ಆಹ್ವಾನಿಸುವ ಬಗ್ಗೆ.

*********

2023–24ನೇ ಸಾಲಿನಲ್ಲಿ ನಡೆದ ವಿವಿಧ ಪರೀಕ್ಷೆಗಳಿಗೆ ಉತ್ತರ ಪತ್ರಿಕೆಗಳನ್ನು ಖರೀದಿಸುವ ಸಂಬಂಧ M/s. Hitech Print Systems Limited, Hyderabad – ಈ ಸಂಸ್ಥೆಯವರೊಂದಿಗೆ ಒಂದು ವರ್ಷದ ಅವಧಿಗೆ ಕರಾರು ದರ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸದರಿ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ ದರ ಒಪ್ಪಂದ ಕರಾರು ಅವಧಿಯು ದಿನಾಂಕ:18.10.2024ಕ್ಕೆ ಮುಕ್ತಾಯಗೊಂಡಿರುತ್ತದೆ.

ಆದ್ದರಿಂದ, 2024–25ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಖಾಲಿ ಉತ್ತರ ಪತ್ರಿಕೆಗಳು ಅವಶ್ಯಕತೆ ಇರುತ್ತದೆ. ಆದುದರಿಂದ, ಇ–ಟೆಂಡರ್ ಪ್ರಕ್ರಿಯೆಗಳ ಮೂಲಕ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಖಾಲಿ ಉತ್ತರ ಪತ್ರಿಕೆಗಳನ್ನು ಖರೀದಿಸುವ ಸಂಬಂಧ (ಇ–ಪೋರ್ಟಲ್‌ನಲ್ಲಿ) ನಿಯಮಾನುಸಾರ ಇ–ಟೆಂಡರ್‌ನಲ್ಲಿ ಅರ್ಜಿ ಆಹ್ವಾನಿಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳನ್ನು ನಡೆಸಲು ಬೇಕಾಗಿರುವ ಖಾಲಿ ಉತ್ತರ ಪತ್ರಿಕೆಗಳನ್ನು ಇ–ಟೆಂಡರ್ (ಇ–ಪೋರ್ಟಲ್) ಮೂಲಕ ನಿಯಮಾನುಸಾರ ಅರ್ಜಿ ಆಹ್ವಾನಿಸಿ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 27 | |
|---|---|
| ವಿಷಯ ಸಂಖ್ಯೆ: | ಸಿಂ.06(b)/(11/24 |

## –: ಟಿಪ್ಪಣಿ :–

**ವಿಷಯಃ ಬಾಡಿಗೆ ವಾಹನ ಸೇವೆ ಪಡೆಯುವ ಸಂಬಂಧ (ಇ–ಪೋರ್ಟಲ್‌ನಲ್ಲಿ) ಟೆಂಡರ್ ಆಹ್ವಾನಿಸುವ ಬಗ್ಗೆ.**

*********

2023–24ನೇ ಸಾಲಿನಲ್ಲಿ ಪರೀಕ್ಷಾಂಗ ವಿಭಾಗದಲ್ಲಿ ನಡೆದ ವಿವಿಧ ಸ್ನಾತಕ / ಸ್ನಾತಕೋತ್ತರ ಮತ್ತು ಬಿ.ಇಡಿ. ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆಯನ್ನು ಪಡೆಯುವ ಸಂಬಂಧ M/s. AL-Hind Tour and Travels, Davangere – ಈ ಸಂಸ್ಥೆಯವರೊಂದಿಗೆ ಒಂದು ವರ್ಷ ಅವಧಿಗೆ ಕರಾರು ದರ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸದರಿ ಸಂಸ್ಥೆಯವರೊಂದಿಗೆ ಮಾಡಿಕೊಂಡಿರುವ ದರ ಒಪ್ಪಂದ ಕರಾರು ಅವಧಿಯ ದಿನಾಂಕ:18.11.2024ಕ್ಕೆ ಕೊನೆಗೊಂಡಿರುತ್ತದೆ.

ಆದ್ದರಿಂದ, 2024–25ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆ ಅವಶ್ಯಕತೆ ಇ–ಟೆಂಡರ್ ಕರೆಯಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ 2024–25ನೇ ಸಾಲಿನ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆ ಪಡೆಯುವ ಸಂಬಂಧ ನಿಯಮಾನುಸಾರ (ಇ–ಪೋರ್ಟಲ್‌ನಲ್ಲಿ) ಟೆಂಡರ್ ಅರ್ಜಿ ಆಹ್ವಾನಿಸಿ ಕ್ರಮಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ, ಸದರಿ ವಿಷಯವನ್ನು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ವಿಶ್ವವಿದ್ಯಾನಿಲಯದ 2024–25ನೇ ಶೈಕ್ಷಣಿಕ ಸಾಲಿನಲ್ಲಿ ಜರುಗಲಿರುವ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷಾ ಕಾರ್ಯಗಳಿಗೆ ಬಾಡಿಗೆ ವಾಹನಗಳ ಸೇವೆ ಪಡೆಯಲು ಇ–ಟೆಂಡರ್ (ಇ–ಪೋರ್ಟಲ್) ಮೂಲಕ ನಿಯಮಾನುಸಾರ ಅರ್ಜಿ ಆಹ್ವಾನಿಸಿ ಕ್ರಮಕೈಗೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 28 | |
|---|---|
| ವಿಷಯ ಸಂಖ್ಯೆ: | ಸಿಂ.06(c)/(11/24 |

## –: ಟಿಪ್ಪಣಿ :–

**ವಿಷಯ:** ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು – ಈ ಸಂಸ್ಥೆಯಿಂದ ಖಾಲಿ ಅಂಕಪಟ್ಟಿಗಳನ್ನು ಖರೀದಿಸುವ ಕುರಿತು.

*********

ಸರ್ಕಾರದ ಆದೇಶಾನುಸಾರ 2020–21ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ ಜಾರಿಗೊಳಿಸಿರುವ NEP–2020 ಪಠ್ಯಕ್ರಮವನ್ನು ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಅಳವಡಿಸಿಕೊಂಡು ಬೋಧಿಸಲಾಗುತ್ತಿದೆ. ಸದರಿ ಪಠ್ಯಕ್ರಮದಲ್ಲಿ ಈಗಾಗಲೇ 03 ವರ್ಷಗಳ ಪದವಿ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳಿಗೆ ಮತ್ತು ಬಿ.ಇಡಿ., ಬಿ.ಪಿ.ಇಡಿ., ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ತುರ್ತಾಗಿ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಬೇಕಾಗಿರುತ್ತದೆ.

ಆದ್ದರಿಂದ, ಉತ್ತೀರ್ಣಗೊಂಡ ಎಲ್ಲಾ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ವಿತರಿಸಲು ಸುಮಾರು ಎರಡು ಲಕ್ಷ ಖಾಲಿ ಅಂಕಪಟ್ಟಿಗಳ ಅವಶ್ಯಕತೆ ಇರುತ್ತವೆ. ಈಗಾಗಲೇ, ವ್ಯಾಸಂಗ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಉದ್ಯೋಗಕ್ಕಾಗಿ, ಮುಂದಿನ ವಿದ್ಯಾಭ್ಯಾಸಕ್ಕಾಗಿ, ವಿದ್ಯಾರ್ಥಿ ವೇತನ, ನಗದು ಬಹುಮಾನ ಹಾಗೂ ವಿದೇಶ ವ್ಯಾಸಂಗಕ್ಕಾಗಿ ಅಂಕಪಟ್ಟಿಗಳನ್ನು ವಿತರಿಸುವಂತೆ ಕಾಲೇಜು ಪ್ರಾಂಶುಪಾಲರ ಮೂಲಕ ಮನವಿ ಪತ್ರಗಳನ್ನು ಸಲ್ಲಿಸುತ್ತಿದ್ದಾರೆ. ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು– ಈ ಸಂಸ್ಥೆಯಿಂದ ಈಗಾಗಲೇ ಒಂದು ಲಕ್ಷ ಖಾಲಿ ಅಂಕಪಟ್ಟಿ ಖರೀದಿಸಲಾಗಿದ್ದು, ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸುವ ಕಾರ್ಯ ಪ್ರಗತಿ ಹಂತದಲ್ಲಿರುತ್ತದೆ. ವಿದ್ಯಾರ್ಥಿಗಳ ಎಲ್ಲ ಸೆಮಿಸ್ಟರ್‌ಗಳ ಅಂಕಪಟ್ಟಿಗಳನ್ನು ಮುದ್ರಿಸಲು ಇನ್ನು ಒಂದು ಲಕ್ಷ ಖಾಲಿ ಅಂಕಪಟ್ಟಿಗಳು ಬೇಕಾಗಿರುತ್ತದೆ. ಆದುದರಿಂದ, ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು – ಈ ಸಂಸ್ಥೆಯಿಂದ ಒಂದು ಲಕ್ಷ ಖಾಲಿ ಅಂಕಪಟ್ಟಿಗಳು ಖರೀದಿಸುವ ಸಂಬಂಧ ಸದರಿ ವಿಷಯವನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ಸರ್ಕಾರದ ಆದೇಶಾನುಸಾರ 2020–21ನೇ ಶೈಕ್ಷಣಿಕ ಸಾಲಿನಿಂದ ಅನ್ವಯವಾಗುವಂತೆ NEP–2020 ಪಠ್ಯಕ್ರಮವನ್ನು ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ/ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ, ಉದ್ಯೋಗಕ್ಕಾಗಿ ಹಾಗೂ ಇತರೆ ಶೈಕ್ಷಣಿಕ ಉದ್ದೇಶಗಳಿಗಾಗಿ ಅಂಕಪಟ್ಟಿಗಳನ್ನು ಮುದ್ರಿಸಿ ವಿತರಿಸಲು ಅಗತ್ಯವಿರುವ 01 ಲಕ್ಷ ಖಾಲಿ ಅಂಕಪಟ್ಟಿಗಳನ್ನು ಸರ್ಕಾರದ ಅಂಗ ಸಂಸ್ಥೆಯಾದ ಮೆ॥ ಎಂ.ಎಸ್.ಐ.ಎಲ್, ಬೆಂಗಳೂರು ಇವರಿಂದ ನಿಯಮಾನುಸಾರ ಖರೀದಿಸಲು ಸಭೆಯು ಒಮ್ಮತದಿಂದ ಅನುಮೋದನೆ ನೀಡಿತು.

ಕುಲಸಚಿವರು                ಕುಲಪತಿಗಳು

| ಪರೀಕ್ಷಾಂಗ ವಿಭಾಗ – 29 | |
| --- | --- |
| ವಿಷಯ ಸಂಖ್ಯೆ: | ಸಿಂ.06(d)/(11/24 |

## –: ಟಿಪ್ಪಣಿ :–

ವಿಷಯಃ ಮೆ: ಲಾಜಿಸಿಸ್ ಮತ್ತು ಯುನಿಕ್ಲೇರ್ ಸಲೂಷನ್ಸ್ ಪ್ರೈ. ಲಿ., ಬೆಂಗಳೂರು – ಈ ಸಂಸ್ಥೆಯವರಗೊಂಗೆ ಪರೀಕ್ಷಾ ತಂತ್ರಾಂಶಗಳ ಕರಾರು ಒಪ್ಪಂದ ಸೇವಾ ಅವಧಿಯನ್ನು ಮುಂದುವರೆಸುವ ಕುರಿತು.

*********

ನವೆಂಬರ್/ ಡಿಸೆಂಬರ್–2018ರ ಮಾಹೆಯಲ್ಲಿ ಪರೀಕ್ಷಾ ತಂತ್ರಾಂಶಕ್ಕೆ ಸಂಬಂಧಿಸಿದ ಕಾರ್ಯಗಳಿಗಾಗಿ ನಿಯಮಾನುಸಾರ ಇ–ಟೆಂಡರ್ ಪ್ರಕ್ರಿಯೆಗಳ ಮೂಲಕ ಮೆ: ಲಾಜಿಸಿಸ್ (ಸಾಫ್ಟವೇರ್) ಮತ್ತು ಮೆ: ಯುನಿಕ್ಲೇರ್ ಸಲೂಷನ್ಸ್ ಪ್ರೈ ಲಿ., ಬೆಂಗಳೂರು – ಈ ಸಂಸ್ಥೆಯವರೊಂದಿಗೆ 05 ವರ್ಷಗಳ ಅವಧಿಯವರೆಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿರುತ್ತದೆ. ಸದರಿ ಕರಾರು ಒಪ್ಪಂದ ಅವಧಿಯು ಅಕ್ಟೋಬರ್–2023ರ ಅಂತ್ಯಕ್ಕೆ ಮುಕ್ತಾಯಗೊಂಡಿದ್ದರಿಂದ, ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಪರೀಕ್ಷಾ ಫಲಿತಾಂಶ ಪ್ರಕಟಿಸುವ ಸಂಬಂಧ ಪುನ: ಅಕ್ಟೋಬರ್–2023 ರಿಂದ ಅಕ್ಟೋಬರ್–2024ರವರೆಗೆ ಒಂದು ವರ್ಷದ ಅವಧಿಗೆ ಪರೀಕ್ಷಾ ತಂತ್ರಾಂಶ ಸೇವೆಯನ್ನು ಪಡೆಯಲು ಅವಧಿಯನ್ನು ವಿಸ್ತರಿಸಿ ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಕರಾರು ಒಪ್ಪಂದ ವಿಸ್ತರಿಸಿದ ಅವಧಿಯು ಅಕ್ಟೋಬರ್–2024ಕ್ಕೆ ಮುಕ್ತಾಯವಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ/ಸ್ನಾತಕೋತ್ತರ, ಬಿ.ಇಡಿ., ಪದವಿಗಳಲ್ಲಿ ಇನ್ನು ಸುಮಾರು 6004 ಅನುತ್ತೀರ್ಣ ವಿದ್ಯಾರ್ಥಿಗಳಿರುತ್ತಾರೆ. ಪ್ರಸ್ತುತ ವಿಶ್ವವಿದ್ಯಾನಿಲಯದ ನಿಯಮಾವಳಿಯನುಸಾರ ಬಿ.ಇಡಿ. ವಿದ್ಯಾರ್ಥಿಗಳಿಗೆ (Double the duration) ಡಿಸೆಂಬರ್–2024ರಲ್ಲಿ ಪರೀಕ್ಷೆಯನ್ನು ನಡೆಸಬೇಕಾಗಿರುತ್ತದೆ.

ಈ ಪ್ರಯುಕ್ತ, ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸುವ ಸಂಬಂಧ ಮೆ: ಲಾಜಿಸಿಸ್ ಮತ್ತು ಯುನಿಕ್ಲೇರ್ ಸಲೂಷನ್ಸ್ ಪ್ರೈ ಲಿ., ಬೆಂಗಳೂರು – ಈ ಸಂಸ್ಥೆಗಳವರೊಂದಿಗೆ ಪರೀಕ್ಷಾ ತಂತ್ರಾಂಶ ಸೇವಾ ಅವಧಿಯನ್ನು ಅಕ್ಟೋಬರ್–2024ರಿಂದ ಮುಂದಿನ 01 ವರ್ಷದ ಅವಧಿಗೆ ವಿಸ್ತರಿಸಿ ಕರಾರು ದರ ಒಪ್ಪಂದ ಮಾಡಿಕೊಳ್ಳುವ ಕುರಿತು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ನಿರ್ಣಯಕ್ಕಾಗಿ ಮಂಡಿಸಿದೆ.

### :: ನಿರ್ಣಯ ::

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸ್ನಾತಕ/ ಸ್ನಾತಕೋತ್ತರ ಪದವಿಗಳಲ್ಲಿ ಅನುತ್ತೀರ್ಣಗೊಂಡ ವಿದ್ಯಾರ್ಥಿಗಳಿಗೆ ಪರೀಕ್ಷೆ ನಡೆಸಿ ಫಲಿತಾಂಶ ಪ್ರಕಟಿಸಬೇಕಾಗಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮೆ: ಲಾಜಿಸಿಸ್ ಮತ್ತು ಯುನಿಕ್ಲೇರ್ ಸಲೂಷನ್ಸ್ ಪ್ರೈ ಲಿ., ಬೆಂಗಳೂರು – ಈ ಸಂಸ್ಥೆಗಳವರೊಂದಿಗೆ ಪರೀಕ್ಷಾ ತಂತ್ರಾಂಶ ಸೇವಾ ಅವಧಿಯನ್ನು ಅಕ್ಟೋಬರ್–2024ರಿಂದ ಮುಂದಿನ 01 ವರ್ಷದ ಅವಧಿಗೆ ವಿಸ್ತರಿಸಿ ಕರಾರು ದರ ಒಪ್ಪಂದ ಮಾಡಿಕೊಳ್ಳಲು ಸಭೆಯು ಒಮ್ಮತದಿಂದ ಅನುಮೋದಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು　　　　　　　　　　ಕುಲಪತಿಗಳು

| ಪರೀಕ್ಷಾಂಗ ವಿಭಾಗ – 30 | |
|---|---|
| ವಿಷಯ ಸಂಖ್ಯೆ: | ಸಿಂ.06(e)/(11/24 |

## –: ಟಿಪ್ಪಣಿ :–

**ವಿಷಯಃ ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸುವ ಕುರಿತು.**

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ರ ಸೆಕ್ಷನ್ 40(1) (ಸಿ) ಮತ್ತು (ಡಿ) ರನ್ವಯ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಸಂಯೋಜಿತ ಕಾಲೇಜುಗಳಲ್ಲಿ/ ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿನಲ್ಲಿ ಜರುಗಿದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ, ರ್‍ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಇತ್ಯಾದಿಗಳನ್ನು ಪ್ರಧಾನ ಮಾಡಬೇಕಾಗಿರುತ್ತದೆ. ಆದುದರಿಂದ, ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಜನವರಿ/ ಫೆಬ್ರವರಿ–2025 ರ ಮಾಹೆಯಲ್ಲಿ ನಡೆಸಬೇಕಾಗಿರುತ್ತದೆ. ತತ್ಸಂಬಂಧವಾಗಿ, ಈ ವಿಷಯವನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ವಿಶ್ವವಿದ್ಯಾನಿಲಯದಲ್ಲಿ 2023–24ನೇ ಸಾಲಿನಲ್ಲಿ ಜರುಗಿದ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪದವಿ ಪ್ರಮಾಣ ಪತ್ರ, ರ್‍ಯಾಂಕ್ ಪ್ರಮಾಣ ಪತ್ರ, ಚಿನ್ನದ ಪದಕ ಇತ್ಯಾದಿಗಳನ್ನು ಪ್ರಧಾನ ಮಾಡಲು ವಿಶ್ವವಿದ್ಯಾನಿಲಯದ 12ನೇ ವಾರ್ಷಿಕ ಘಟಿಕೋತ್ಸವ ಸಮಾರಂಭವನ್ನು ಜನವರಿ/ ಫೆಬ್ರವರಿ–2025 ರ ಮಾಹೆಯಲ್ಲಿ ಏರ್ಪಡಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 31 | |
|---|---|
| ವಿಷಯ ಸಂಖ್ಯೆ: | ಸಿಂ.07(a)/(11/24 |

## –: ಟಿಪ್ಪಣಿ :–

ವಿಷಯ: **2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಶುಲ್ಕಗಳನ್ನು ಅನುಮೋದಿಸುವ ಬಗ್ಗೆ.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್‌ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿನಾಂಕ:15.10.2024.
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ–149/2024–25/2598 ದಿನಾಂಕ:22.10.2024

*********

2025–26ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ನವೀನ ಸಂಯೋಜನೆ/ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ ನವೀನ ಐಚ್ಛಿಕ ವಿಷಯ ಹಾಗೂ ಇತರೇ ಶುಲ್ಕಗಳನ್ನು 2024–25ನೇ ಶೈಕ್ಷಣಿಕ ಸಾಲಿನಲ್ಲಿರುವ ಸಂಯೋಜನಾ ಶುಲ್ಕಗಳನ್ನು '2025–26ನೇ ಶೈಕ್ಷಣಿಕ ಸಾಲಿಗೆ ಯಥಾವತ್ತಾಗಿ' ಅಳವಡಿಸಿಕೊಳ್ಳುವಂತೆ ಹಾಗೂ ಬಿ.ಎ./ಬಿ.ಎಸ್ಸಿ ಪದವಿಗಳಿಗೆ ವಿಷಯ ಸಮೂಹ ಪರಿಗಣಿಸಿದೇ (ಒಂದು ವಿಭಾಗಕ್ಕೆ 1 ರಿಂದ 60 ರಂತೆ) ಹೆಚ್ಚುವರಿ ವಿಭಾಗಗಳಿಗೆ ಶುಲ್ಕವನ್ನು ಮತ್ತು ಸಂಯೋಜನೆಗೆ ಅರ್ಜಿ ಸಲ್ಲಿಸಿದ ಪ್ರತಿ ಪದವಿಗೆ ಪ್ರತ್ಯೇಕವಾಗಿ ಸೇವಾ ಹಾಗೂ ಅಭಿವೃದ್ಧಿ ಶುಲ್ಕವನ್ನು ವಿಧಿಸಲು ದಿನಾಂಕ:15.10.2024ರಂದು ನಡೆದ ಡೀನರ ಸಭೆಯಲ್ಲಿ ನಿರ್ಣಯಿಸಲಾಯಿತು. ಅದರಂತೆ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ 2025–26ನೇ ಸಾಲಿಗೆ ವಿವಿಧ ಸಂಯೋಜನ ಶುಲ್ಕಗಳನ್ನು ನಿಗದಿಪಡಿಸಿ ಅದಕ್ಕೆ 18% ಜಿಎಸ್‌ಟಿ ಯನ್ನು ಪ್ರತ್ಯೇಕವಾಗಿ ವಿಧಿಸುವಂತೆ ನಿರ್ಣಯಿಸಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. (ಪ್ರತಿ ಲಗತ್ತಿಸಿದೆ)

ತತ್ಸಂಬಂಧ, 2025–26ನೇ ಶೈಕ್ಷಣಿಕ ಸಾಲಿಗೆ ನಿಗದಿಪಡಿಸಿ ಪಾವತಿಸಿಕೊಳ್ಳಬಹುದಾದ ವಿವಿಧ ಸಂಯೋಜನಾ ಶುಲ್ಕಗಳು ಹಾಗೂ ವಿಧಿಸಲಾಗುವ ಜಿಎಸ್‌ಟಿ ದರಗಳ ಬಗ್ಗೆ ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

2024–25ನೇ ಶೈಕ್ಷಣಿಕ ಸಾಲಿನ ಕಾಲೇಜುಗಳ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳ ನವೀನ ಸಂಯೋಜನೆ/ ಮುಂದುವರಿಕೆ ಸಂಯೋಜನೆ/ ಶಾಶ್ವತ ಸಂಯೋಜನೆ/ ಶಾಶ್ವತ ಸಂಯೋಜನೆ ಪರಿವೀಕ್ಷಣೆ/ ಶಾಶ್ವತ ಸಂಯೋಜನೆ ನವೀಕರಣ/ ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ ನವೀನ ಕೋರ್ಸು/ ನವೀನ ಐಚ್ಛಿಕ ವಿಷಯ ಹಾಗೂ ಇತರೇ ಶುಲ್ಕಗಳಿಗೆ ಸಂಬಂಧಿಸಿದಂತೆ 2024–25ನೇ ಶೈಕ್ಷಣಿಕ ಸಾಲಿನಲ್ಲಿರುವ ಸಂಯೋಜನಾ ಶುಲ್ಕಗಳನ್ನು '2025–26ನೇ ಶೈಕ್ಷಣಿಕ ಸಾಲಿಗೆ ಯಥಾವತ್ತಾಗಿ' ಅಳವಡಿಸಿಕೊಳ್ಳುವಂತೆ ಹಾಗೂ ಬಿ.ಎ./ಬಿ.ಎಸ್ಸಿ ಪದವಿಗಳಿಗೆ ವಿಷಯ ಸಮೂಹ ಪರಿಗಣಿಸದೇ (ಒಂದು ವಿಭಾಗಕ್ಕೆ 1 ರಿಂದ 60 ರಂತೆ) ಹೆಚ್ಚುವರಿ ವಿಭಾಗಗಳಿಗೆ ಶುಲ್ಕವನ್ನು ಮತ್ತು ಸಂಯೋಜನೆಗೆ ಅರ್ಜಿ ಸಲ್ಲಿಸಿದ ಪ್ರತಿ ಪದವಿಗೆ ಪ್ರತ್ಯೇಕವಾಗಿ ಸೇವಾ ಹಾಗೂ ಅಭಿವೃದ್ಧಿ ಶುಲ್ಕವನ್ನು ವಿಧಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 32 | |
|---|---|
| ವಿಷಯ ಸಂಖ್ಯೆ: | ಸಿಂ.07(b)/(11/24 |

## –: ಟಿಪ್ಪಣಿ :–

**ವಿಷಯ: ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳಿಂದ ಸಂಯೋಜನಾ ಅರ್ಜಿಗಳನ್ನು ಆಹ್ವಾನಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯ ಡೀನರ ಸಮಿತಿ ನಿರ್ಣಯ ದಿನಾಂಕ:15.10.2024.
3. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–149/2024–25/2598 ದಿನಾಂಕ:22.10.2024

*********

ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿನ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಹೊಸದಾಗಿ ಕಲಾ, ವಿಜ್ಞಾನ, ವಾಣಿಜ್ಯ ಮತ್ತು ಆಡಳಿತ ನಿರ್ವಹಣೆ, ಶಿಕ್ಷಣ ಹಾಗೂ ದೈಹಿಕ ಶಿಕ್ಷಣ ಪದವಿ, ಹಾಗೂ ಇನ್ನಿತರೆ ಸಾಂಪ್ರದಾಯಿಕ ಕಾಲೇಜುಗಳನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇಂತಹ ಕಾಲೇಜುಗಳನ್ನು ರಾಜ್ಯ ಸರ್ಕಾರದ/ವಿಶ್ವವಿದ್ಯಾನಿಲಯದ ಅನುದಾನದ ಅಪೇಕ್ಷೆ ಇಲ್ಲದೆ ಕಾಲೇಜುಗಳನ್ನು ನಡೆಸಲು ಆರ್ಥಿಕ ಸಾಮರ್ಥ್ಯವುಳ್ಳ ನೊಂದಾಯಿತ ಸೊಸೈಟಿ, ಸಾರ್ವಜನಿಕ ಟ್ರಸ್ಟ್/ಸಂಸ್ಥೆಗಳಿಂದ ನವೀನ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಲ್ಲದೇ ಪ್ರಸ್ತುತ ವಿಶ್ವವಿದ್ಯಾನಿಲಯದ ಸಂಯೋಜನೆ ಹೊಂದಿರುವ ಎಲ್ಲಾ ಸಂಯೋಜಿತ ಕಾಲೇಜುಗಳಿಂದಲೂ, 2025–26ನೇ ಶೈಕ್ಷಣಿಕ ಸಾಲಿಗಾಗಿ ತಮ್ಮ ಕಾಲೇಜುಗಳ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತತ್ಸಂಬಂಧ, ಸದರಿ ವಿಷಯವನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

2025–26ನೇ ಶೈಕ್ಷಣಿಕ ಸಾಲಿಗಾಗಿ ವಿವಿಧ ಕಾಲೇಜುಗಳಿಂದ ಸ್ನಾತಕ ಹಾಗೂ ಸ್ನಾತಕೋತ್ತರ ಕೋರ್ಸುಗಳ ಮುಂದುವರಿಕೆ ಸಂಯೋಜನೆ/ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ ಹಾಗೂ ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಹೊಸ ಸ್ನಾತಕೋತ್ತರ ಕೋರ್ಸುಗಳಿಗೆ ಸಂಯೋಜನೆಗಾಗಿ ಅರ್ಜಿ ಆಹ್ವಾನಿಸಿರುವುದನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 33 | |
|---|---|
| ವಿಷಯ ಸಂಖ್ಯೆ: | ಸಿಂ.07(c)/(11/24 |

## –: ಟಿಪ್ಪಣಿ :–

ವಿಷಯ: **2025–26ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ಸ್ಥಳೀಯ ತಪಾಸಣಾ ಸಮಿತಿಗಳನ್ನು ರಚಿಸಿರುವ ಹಾಗೂ ದಿನಭತ್ಯೆ ಮೊತ್ತವನ್ನು ನಿಗದಿಪಡಿಸಿ ಅನುಮೋದಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–149/2024–25/2598 ದಿನಾಂಕ:22.10.2024

*********

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ ಬಿ.ಪಿ.ಇಡಿ ಪದವಿ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (3)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಸಂಬಂಧವಾಗಿ, ವಿಶ್ವವಿದ್ಯಾನಿಲಯದ ಸಂಲಗ್ನಗೊಂಡ ಕಾಲೇಜುಗಳ ಪ್ರಾಂಶುಪಾಲರು/ಆಡಳಿತ ಮಂಡಳಿಯವರು ತಮ್ಮ ಕಾಲೇಜಿನ 2025–26ನೇ ಶೈಕ್ಷಣಿಕ ಸಾಲಿನ ನವೀನ ಸಂಯೋಜನೆ/ಮುಂದುವರಿಕೆ ಸಂಯೋಜನೆ/ನವೀನ ಶಾಶ್ವತ ಸಂಯೋಜನೆ/ಶಾಶ್ವತ ಸಂಯೋಜನೆ ಪರಿವೀಕ್ಷಣೆ/ಶಾಶ್ವತ ಸಂಯೋಜನೆ ನವೀಕರಣ/ವಿದ್ಯಾರ್ಥಿ ಪ್ರವೇಶ ಮಿತಿ ಹೆಚ್ಚಳ/ನವೀನ ಕೋರ್ಸು/ನವೀನ ಐಚ್ಛಿಕ ವಿಷಯ ಇತ್ಯಾದಿಗಳ ಸಂಯೋಜನೆಗಾಗಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಸದರಿ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಬೋಧಕರನ್ನೊಳಗೊಂಡಂತೆ ಸಮಿತಿಗಳನ್ನು ರಚಿಸಲಾಗುತ್ತದೆ. ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗುವ ಅಧ್ಯಕ್ಷರು/ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಪಾವತಿಸಲಾಗುವ ಗೌರವ ಸಂಭಾವನೆಯನ್ನು ಕೆಳಕಂಡಂತೆ ನಿಗದಿಪಡಿಸಿ ಅನುಮೋದಿಸುವಂತೆ ಕೋರಲಾಗಿದೆ.

| ಕ್ರ.ಸಂ. | ವಿವರ | 2025–26ನೇ ಸಾಲಿನಿಂದ ಅನ್ವಯವಾಗುವಂತೆ |
|---|---|---|
| 1 | ಅಧ್ಯಕ್ಷರು (ಬಾಹ್ಯ ಸದಸ್ಯರುಗಳನ್ನೊಳಗೊಂಡಂತೆ) | ರೂ.1800/– |
| 2 | ಸದಸ್ಯರು | ರೂ.1500/– |
| 3 | ಬಾಹ್ಯ ಸದಸ್ಯರಿಗೆ ಕಾರು ಮೈಲೇಜು ದರ ಪ್ರತಿ ಕಿ.ಮಿ.ಗೆ (ಉಪಸ್ಥಿತ ಭತ್ಯೆ ಇರುವುದಿಲ್ಲ) | ರೂ.10/– |

ಈ ಕುರಿತು ದಿನಾಂಕ:30.11.2024 ರಂದು ಏರ್ಪಡಿಸಲಾಗುವ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು 2025–26ನೇ ಸಾಲಿನ ಸ್ಥಳೀಯ ತಪಾಸಣಾ ಸಮಿತಿಗಳಿಗೆ ನಿಯೋಜಿಸಲಾಗುವ ಅಧ್ಯಕ್ಷರು/ಸದಸ್ಯರುಗಳಿಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಈ ಮೇಲ್ಕಂಡ ಪಟ್ಟಿಯಲ್ಲಿರುವಂತೆ ಗೌರವ ಸಂಭಾವನೆಯನ್ನು ಪಾವತಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 34 | |
| --- | --- |
| ವಿಷಯ ಸಂಖ್ಯೆ: | ಸಿಂ.07(d)/(11/24) |

## –: ಟಿಪ್ಪಣಿ :–

ವಿಷಯ: ಕೆ.ಎಸ್.ಎಸ್. ಎಂ.ಇಡಿ. ಕಾಲೇಜು, ದಾವಣಗೆರೆ – ಇಲ್ಲಿ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಪ್ರಾರಂಭಿಸುವ ಕುರಿತು.

ಉಲ್ಲೇಖ:
1. ಕೆ.ಎಸ್.ಎಸ್. ಫೌಂಡೇಷನ್ (ರಿ.) ದಾವಣಗೆರೆ ಇವರ ಮನವಿ ಪತ್ರ: ದಿನಾಂಕ:06.09.2024.
2. ಸ್ಥಳೀಯ ತಪಾಸಣಾ ಸಮಿತಿಯ ವರದಿ ದಿ:12.09.2024.

*********

ಕೆ.ಎಸ್.ಎಸ್. ಸಂಸ್ಥೆಯಲ್ಲಿ ಸ್ನಾತಕೋತ್ತರ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಂಬಂಧ, ದಿನಾಂಕ:06.09.2024ರಂದು ಸಂಸ್ಥೆಯ ಮುಖ್ಯಸ್ಥರು ಸಲ್ಲಿಸಿದ ಮನವಿ ಮೇರೆಗೆ ವಿಶ್ವವಿದ್ಯಾನಿಲಯದ ನಿಯಮಗಳನುಸಾರ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಕಾಲೇಜು ಅಭಿವೃದ್ಧಿ ಪರಿಷತ್ತು ವಿಭಾಗದ ವತಿಯಿಂದ ದಿನಾಂಕ:12.09.2024ರಂದು ವಿಶ್ವವಿದ್ಯಾನಿಲಯದಿಂದ ನಿಯೋಜನೆಗೊಂಡ ಸ್ಥಳೀಯ ತಪಾಸಣಾ ಸಮಿತಿಯ ಅಧ್ಯಕ್ಷರು/ ಸದಸ್ಯರುಗಳು ಸದರಿ ಕಾಲೇಜಿಗೆ ಭೇಟಿ ನೀಡಿ ಪರಿಶೀಲಿಸಿ, ಶಿಫಾರಸ್ಸು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

ಸದರಿ ಕಾಲೇಜಿನಲ್ಲಿ 2025–26ನೇ ಶೈಕ್ಷಣಿಕ ಸಾಲಿನಿಂದ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಬಗ್ಗೆ ಚರ್ಚಿಸಿ ಮುಂದಿನ ಸೂಕ್ತ ಕ್ರಮಕೈಗೊಳ್ಳಬೇಕಾಗಿರುತ್ತದೆ. ಈ ಕುರಿತು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

2025–26ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಶೈಕ್ಷಣಿಕ ಸಂಶೋಧನಾ ಕೇಂದ್ರವನ್ನು ಕೆ.ಎಸ್.ಎಸ್. ಕಾಲೇಜಿನಲ್ಲಿ ಸ್ಥಾಪಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದುವರೆದು, ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸಭೆಯು ಒಮ್ಮತದಿಂದ ನಿರ್ಣಯಿಸಿತು.

ಕುಲಸಚಿವರು

ಕುಲಪತಿಗಳು

| ಕಾಲೇಜು ಅಭಿವೃದ್ಧಿ ಪರಿಷತ್ತು – 35 | |
|---|---|
| ವಿಷಯ ಸಂಖ್ಯೆ: | ಸಿಂ.07(e)/(11/24) |

## –: ಟಿಪ್ಪಣಿ :–

ವಿಷಯ: **2025–26ನೇ ಶೈಕ್ಷಣಿಕ ಸಾಲಿಗೆ ಕಾಲೇಜುಗಳ ಭೌತಿಕ ಪರಿಶೀಲನೆಗೆ ರಚಿಸಲಾಗಿರುವ ಸ್ಥಳೀಯ ತಪಾಸಣಾ ಸಮಿತಿಗಳನ್ನು ಅನುಮೋದಿಸುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ಸಂಯೋ–149/2024–25/2598 ದಿನಾಂಕ:22.10.2024

*********

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59) ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ ಉಲ್ಲೇಖಿತ (2)ರಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ತತ್ಸಂಬಂಧವಾಗಿ, ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸುವ ಸಲುವಾಗಿ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳನ್ನು ಹಾಗೂ ಸ್ನಾತಕೋತ್ತರ ಪದವಿ ಕಾಲೇಜುಗಳ ಭೌತಿಕ ಪರಿಶೀಲನೆಗೆ ಒಬ್ಬ ಬಾಹ್ಯ ಸದಸ್ಯ (ಅನ್ಯ ವಿಶ್ವವಿದ್ಯಾನಿಲಯದ) ಬೋಧಕರನ್ನೊಳಗೊಂಡಂತೆ ರಚಿಸಲಾಗಿರುವ ಸಮಿತಿಗಳನ್ನು (ಪಟ್ಟಿ ಲಗತ್ತಿಸಿದೆ) ಅನುಮೋದಿಸುವ ಬಗ್ಗೆ ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಕಾಲೇಜುಗಳು ನೀಡಿರುವ ವಿವರಗಳನ್ನು ಭೌತಿಕವಾಗಿ ಪರಿಶೀಲಿಸಲು ರಚಿಸಿರುವ ಭೌತಿಕ ತಪಾಸಣಾ ಸಮಿತಿಗಳ ಪಟ್ಟಿಯನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 36 | |
|---|---|
| ವಿಷಯ ಸಂಖ್ಯೆ: | ಸಿಂ.08(a)/(11/24 |

# –: ಟಿಪ್ಪಣಿ :–

**ವಿಷಯಃ ದಿನಾಂಕ:28.10.2024ರಂದು ಜರುಗಿದ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

*********

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು – ಇಲ್ಲಿ ದಿನಾಂಕ:28.10.2024ರಂದು ಜರುಗಿದ ವಿಶ್ವವಿದ್ಯಾನಿಲಯದ 2024–25ನೇ ಆರ್ಥಿಕ ವರ್ಷದ **ಎರಡನೇ ಹಣಕಾಸು** ಸಮಿತಿ ಸಭೆಯಲ್ಲಿ ಚರ್ಚಿಸಿ ಕೈಗೊಂಡ ನಿರ್ಣಯಗಳ ನಡಾವಳಿಗಳನ್ನು, ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಎರಡನೇ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಕುರಿತು ಸುದೀರ್ಘವಾಗಿ ಚರ್ಚಿಸಿದ ಬಳಿಕ ಸಭೆಯು ನಡಾವಳಿಗಳನ್ನು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 37 | |
|---|---|
| ವಿಷಯ ಸಂಖ್ಯೆ: | ಸಿಂ.08(b)/(11/24 |

## –ಃ ಟಿಪ್ಪಣಿ ಃ–

**ವಿಷಯಃ ವಿಶ್ವವಿದ್ಯಾನಿಲಯದ ಉಳಿತಾಯ ಮತ್ತು ಚಾಲ್ತಿ ಖಾತೆಗಳ ಅನುಮೋದನೆ ಕುರಿತು.**

*********

ವಿಶ್ವವಿದ್ಯಾನಿಲಯದ 2009–10 ನೇ ಸಾಲಿನಿಂದ ಪ್ರಸ್ತುತ ಆರ್ಥಿಕ ವರ್ಷದವರೆಗು ವಿಶ್ವವಿದ್ಯಾನಿಲಯವು ಕಛೇರಿ ಕಾರ್ಯಗಳಿಗೆ ಉಪಯೋಗಿಸುತ್ತಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಬೇಕಾಗಿರುವುದರಿಂದ ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯವು 2009–10ನೇ ಸಾಲಿನಿಂದ ಪ್ರಸ್ತುತ ಆರ್ಥಿಕ ವರ್ಷದವರೆಗಿನ ಕಛೇರಿ ಕಾರ್ಯಗಳಿಗೆ ಉಪಯೋಗಿಸುತ್ತಿರುವ ಉಳಿತಾಯ ಮತ್ತು ಚಾಲ್ತಿ ಖಾತೆಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 38 | |
| --- | --- |
| ವಿಷಯ ಸಂಖ್ಯೆ: | ಸಿಂ.08(c)/(11/24 |

## –: ಟಿಪ್ಪಣಿ :–

ವಿಷಯ: ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಪರಿಷ್ಕೃತ ಆಂತರಿಕ ಆಯ–ವ್ಯಯ ಶೀರ್ಷಿಕೆಯನ್ನು ಅನುಮೋದಿಸುವ ಕುರಿತು.

*********

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ–2000 ನಿಯಮ '48' ರ ಪ್ರಕಾರ 2024–25ನೇ ಸಾಲಿನ ಮಧ್ಯಂತರ ಪರಿಷ್ಕೃತ ಆಯ–ವ್ಯಯ ಅಂದಾಜನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನ ಮಧ್ಯಂತರ ಪರಿಷ್ಕೃತ ಆಯ–ವ್ಯಯ ಅಂದಾಜು ಕುರಿತು ಸುಧೀರ್ಘವಾಗಿ ಚರ್ಚಿಸಿದ ನಂತರ ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 39 | |
|---|---|
| ವಿಷಯ ಸಂಖ್ಯೆ: | ಸಿಂ.08(d)/(11/24 |

# –: ಟಿಪ್ಪಣಿ :–

ವಿಷಯ: **2024–25ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ಹೆಚ್ಚುವರಿ ಹಣವನ್ನು ಟೆಂಡರ್ ಮೂಲಕ ಆಯ್ಕೆಯಾದ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಗೆ ತೊಡಗಿಸಿರುವ ಕುರಿತು.**

ಉಲ್ಲೇಖ: ಇ–ಪ್ರೂಕುರ್ಮೆಂಟ್ ದಿನಾಂಕ:17–09–2024 ಹಾಗೂ ಇ–ಹರಾಜು ದಿನಾಂಕ:24.09.2024

*********

2024–25ನೇ ಹಣಕಾಸು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಹಣವನ್ನು ಆರ್.ಆರ್.ಬಿ ಸೇರಿದಂತೆ ವಿವಿದ ರಾಷ್ಟ್ರೀಕೃತ ಹಾಗೂ ಸಾರ್ವಜನಿಕ ವಲಯದ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಇ–ಪ್ರೋಕ್ಯರ್‌ಮೆಂಟ್ ಮೂಲಕ ಟೆಂಡರ್ ಅಹ್ವಾನಿಸಲಾಗಿತ್ತು, ಸದರಿ ಟೆಂಡರ್‌ನಲ್ಲಿ ಹೆಚ್ಚಿನ ಬಡ್ಡಿದರ ಸೂಚಿಸಿರುವ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ನಿಶ್ಚಿತ ಠೇವಣಿಯನ್ನು ತೊಡಗಿಸಲಾಗಿದೆ. ಈ ವಿಷಯವನ್ನು ದಿನಾಂಕ:30.11.2024ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸಲಾಗಿದೆ.

## :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯವು 2024–25ನೇ ಹಣಕಾಸು ವರ್ಷದಲ್ಲಿ ವಿಶ್ವವಿದ್ಯಾನಿಲಯದ ಹಣವನ್ನು ಆರ್.ಆರ್.ಬಿ ಸೇರಿದಂತೆ ವಿವಿದ ರಾಷ್ಟ್ರೀಕೃತ ಹಾಗೂ ಸಾರ್ವಜನಿಕ ವಲಯದ ಶೆಡ್ಯೂಲ್ಡ್ ಬ್ಯಾಂಕುಗಳಿಂದ ಇ–ಪ್ರೋಕ್ಯರ್‌ಮೆಂಟ್ ಮೂಲಕ ಟೆಂಡರ್ ಅಹ್ವಾನಿಸಿ, ಸದರಿ ಟೆಂಡರ್‌ನಲ್ಲಿ ಹೆಚ್ಚಿನ ಬಡ್ಡಿದರ ಸೂಚಿಸಿದ ಭಾರತೀಯ ಸ್ಟೇಟ್ ಬ್ಯಾಂಕ್(SBI)ನಲ್ಲಿ ನಿಶ್ಚಿತ ಠೇವಣಿ ತೊಡಗಿಸಿರುವುದನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ– 40 | |
| --- | --- |
| ವಿಷಯ ಸಂಖ್ಯೆ: | ಸಿಂ.08(e)/(11/24) |

## –: ಟಿಪ್ಪಣಿ :–

ವಿಷಯಃ ಎಸ್.ಬಿ.ಐ. ಫೇ ಆನ್‌ಲೈನ್ ಸ್ವೀಕೃತಿ ಮಾಡಿ ಎಸ್.ಬಿ.ಐ. ಸಂಗ್ರಹಣೆ ಬ್ಯಾಂಕ್ ಮೂಲಕ ಪ್ರವೇಶ ಶುಲ್ಕವನ್ನು ಸ್ವೀಕರಿಸಲು ಅನುಮೋದನೆ ನೀಡುವ ಕುರಿತು.

*********

ದಾವಣಗೆರೆ ವಿಶ್ವವಿದ್ಯಾನಿಲಯದ 2024–25ನೇ ಸಾಲಿನಿಂದ ಸ್ನಾತಕ/ ಸ್ನಾತಕೋತ್ತರ ವಿಭಾಗಗಳ ಪ್ರವೇಶ ಶುಲ್ಕವನ್ನು ಎಸ್.ಬಿ.ಐ. ಆನ್‌ಲೈನ್ ಸ್ವೀಕೃತಿ ಅಂದರೆ ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್/ಪೋನ್ ಪೇ/ ಗೂಗಲ್ ಪೇ ಹಾಗೂ ಇತರೆ ಯು.ಪಿ.ಐ. ಅಪ್ಲಿಕೇಷನ್‌ಗಳ ಮೂಲಕ ಸ್ವೀಕೃತಿ ಮಾಡಿ ಎಸ್.ಬಿ.ಐ. ಸಂಗ್ರಹಣೆ ಬ್ಯಾಂಕ್ ಮೂಲಕ ಪ್ರವೇಶ ಶುಲ್ಕಗಳನ್ನು ನೇರವಾಗಿ ಪ್ರವೇಶ ಖಾತೆಗೆ ಜಮೆಯಾಗುವುದರಿಂದ ವಿದ್ಯಾರ್ಥಿಗಳ ಮಾಹಿತಿಯು ಸಹ ಆನ್‌ಲೈನ್ ಮೂಲಕ ಲಭ್ಯವಾಗುವುದರಿಂದ ಲೆಕ್ಕ ಸಮನ್ವಯಗೊಳಿಸಲು ಸುಗಮವಾಗಲಿದೆ. ಆದ್ದರಿಂದ, ಆನ್‌ಲೈನ್ ಸ್ವೀಕೃತಿಯನ್ನು ಆರಂಭಿಸಲು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕ/ ಸ್ನಾತಕೋತ್ತರ ವಿಭಾಗಗಳ ವಿದ್ಯಾರ್ಥಿಗಳ ಪ್ರವೇಶ ಶುಲ್ಕವನ್ನು ಕ್ರೆಡಿಟ್ ಕಾರ್ಡ್/ಡೆಬಿಟ್ ಕಾರ್ಡ್/ಪೋನ್ ಪೇ/ ಗೂಗಲ್ ಪೇ ಹಾಗೂ ಇತರೆ ಯು.ಪಿ.ಐ. ಅಪ್ಲಿಕೇಷನ್‌ಗಳ ಮೂಲಕ ಸ್ವೀಕರಿಸುವ ಕುರಿತಂತೆ ಇನ್ನೊಂದು ಬಾರಿ ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿಗಳು ಭಾರತೀಯ ಸ್ಟೇಟ್ ಬ್ಯಾಂಕ್ (SBI) ಮ್ಯಾನೆಜರ್ ಜೊತೆ ವಿದ್ಯಾರ್ಥಿಗಳಿಗೆ ನೇರವಾಗುವ ನಿಟ್ಟಿನಲ್ಲಿ ಸಾಧಕ ಭಾದಕಗಳ ಕುರಿತು ಚರ್ಚಿಸಿ ನಂತರ ಕ್ರಮ ಕೈಗೊಳ್ಳುವಂತೆ ನಿರ್ಣಯಿಸಿ ಮುಂದಿನ ಕ್ರಮಕ್ಕಾಗಿ ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 41 | |
|---|---|
| ವಿಷಯ ಸಂಖ್ಯೆ: | ಸಿಂ.08(f)/(11/24) |

## –: ಟಿಪ್ಪಣಿ :–

ವಿಷಯ: **ದಾವಣಗೆರೆ ವಿಶ್ವವಿದ್ಯಾನಿಲಯದ ಜಿಮ್ನಾನ ಚಟುವಟಿಕೆಗಳಿಗೆ ಪ್ರತ್ಯೇಕ ಉಳಿತಾಯ ಖಾತೆ ತೆರೆಯುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಪಿ.ಜಿ. ಜಿಮ್ನಾನ ವಿಭಾಗದ ಕಾರ್ಯನಿರ್ವಹಣೆಗೆ ಹಾಗೂ ಜಿಮ್ನಾನ ಶುಲ್ಕವನ್ನು ಸ್ವೀಕರಿಸಲು ಹಾಗೂ ವೆಚ್ಚಗಳಿಗೆ ಪ್ರತ್ಯೇಕವಾಗಿ ಹೊಸ ಎಸ್.ಬಿ.ಐ. ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ಪ್ರಾರಂಭಿಸಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ಪಿ.ಜಿ. ಜಿಮ್ನಾನ ವಿಭಾಗದ ಕಾರ್ಯನಿರ್ವಹಣೆಗೆ ಹಾಗೂ ಜಿಮ್ನಾನ ಶುಲ್ಕವನ್ನು ಸ್ವೀಕರಿಸಲು ಹಾಗೂ ವೆಚ್ಚಗಳಿಗೆ ಪ್ರತ್ಯೇಕವಾಗಿ ಉಳಿತಾಯ ಖಾತೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (SBI) ನಲ್ಲಿ ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

| ಹಣಕಾಸು ವಿಭಾಗ – 42 | |
|---|---|
| ವಿಷಯ ಸಂಖ್ಯೆ: | ಸಿಂ.08(g)/(11/24) |

## –: ಟಿಪ್ಪಣಿ :–

**ವಿಷಯ: ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಕಾಲೇಜಿನಲ್ಲಿ ಥೀಮ್ ಪಾರ್ಕ್ ಮತ್ತು ಬಯಲು ರಂಗಮಂದಿರ ಪ್ರಾರಂಭಿಸಿರುವುದರಿಂದ ಸದರಿ ಕಾರ್ಯನಿರ್ವಹಣೆಗಾಗಿ ಹೊಸ ಉಳಿತಾಯ ಖಾತೆ ತೆರೆಯುವ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಥೀಮ್ ಪಾರ್ಕ್ ಮತ್ತು ಬಯಲು ರಂಗಮಂದಿರ ಆರಂಭಿಸುವುದರಿಂದ ಪ್ರವೇಶ ಶುಲ್ಕಗಳನ್ನು ಸ್ವೀಕರಿಸಲು ಹಾಗೂ ಇದಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣೆಗಾಗಿ ಮತ್ತು ವೆಚ್ಚಗಳಿಗಾಗಿ ಪ್ರತ್ಯೇಕವಾಗಿ ಎಸ್.ಬಿ.ಐ. ಬ್ಯಾಂಕ್‌ನಲ್ಲಿ ಉಳಿತಾಯ ಖಾತೆಯನ್ನು ತೆರೆಯಲು ದಿನಾಂಕ:30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಥೀಮ್ ಪಾರ್ಕ್ ಮತ್ತು ಬಯಲು ರಂಗಮಂದಿರ ಆರಂಭಿಸುವುದರಿಂದ ಪ್ರವೇಶ ಶುಲ್ಕಗಳನ್ನು ಸ್ವೀಕರಿಸಲು ಹಾಗೂ ಇದಕ್ಕೆ ಸಂಬಂಧಿಸಿದ ಕಾರ್ಯನಿರ್ವಹಣೆ ಮತ್ತು ವೆಚ್ಚಗಳಿಗಾಗಿ ಪ್ರತ್ಯೇಕವಾಗಿ ಉಳಿತಾಯ ಖಾತೆಯನ್ನು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ (SBI) ನಲ್ಲಿ ಪ್ರಾರಂಭಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ಹಣಕಾಸು ವಿಭಾಗ – 43 | |
|---|---|
| ವಿಷಯ ಸಂಖ್ಯೆ: | ಸಿಂ.08(h)/(11/24) |

## –: ಟಿಪ್ಪಣಿ :–

**ವಿಷಯಃ ಶ್ರೀನಾಥ್ ಬಿದರೆ ರವರು ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ರೂ.1.00 ಲಕ್ಷ ಠೇವಣಿ ಇಡುವ ಕುರಿತು.**

ಉಲ್ಲೇಖ:
1. ಶ್ರೀನಾಥ ಬಿದರೆ ಇವರು ಮನವಿ ಪತ್ರದ ದಿನಾಂಕ:18.10.2024
2. ಪ್ರಾಚಾರ್ಯರು, ವಿಶ್ವವಿದ್ಯಾನಿಲಯ ದೃಶ್ಯಕಲಾ ಮಹಾವಿದ್ಯಾಲಯ ಇವರ ಪತ್ರ ಸಂಖ್ಯೆ:ವಿದೃಕಮ/ ಅಭಿವೃದ್ಧಿ/2024–25/97 ದಿನಾಂಕ:18.10.2024.

*********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀನಾಥ ಬಿದರೆಯವರು ದೃಶ್ಯಕಲಾ ಮಹಾವಿದ್ಯಾಲಯದ ಹಳೆ ವಿದ್ಯಾರ್ಥಿಯಾಗಿದ್ದು ಇವರು ತಮ್ಮ ತಂದೆಯವರ ಸ್ಮರಣಾರ್ಥ ರೂ.1,00,000/– ಗಳನ್ನು ದತ್ತಿ ನಿಧಿಯನ್ನು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಠೇವಣಿ ಇಡುವಂತೆ ಕೋರಿರುತ್ತಾರೆ. ಸದರಿ ಮೊತ್ತವನ್ನು ಠೇವಣಿ ರೂಪದಲ್ಲಿ ಇಟ್ಟು ಬರುವ ಬಡ್ಡಿ ಮೊತ್ತವನ್ನು ಸಂಬಂಧಿಸಿದ ಉದ್ಧೇಶಕ್ಕೆ ಬಳಸುವ ಕುರಿತು ಚರ್ಚಿಸಲು ದಿನಾಂಕ:30.11.2024ರಂದು ನಡೆಯಲಿರುವ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

### :: ನಿರ್ಣಯ ::

ಶ್ರೀನಾಥ ಬಿದರೆಯವರು ತಮ್ಮ ತಂದೆಯವರ ಸ್ಮರಣಾರ್ಥ ರೂ.1,00,000/– ಗಳ ದೇಣಿಗೆ ಮೊತ್ತವನ್ನು ಠೇವಣಿ ರೂಪದಲ್ಲಿಟ್ಟು ಬರುವ ಬಡ್ಡಿ ಮೊತ್ತವನ್ನು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆಯುವ ದತ್ತಿ ಉಪನ್ಯಾಸ ಹಾಗೂ ಕಲಾ ಚಟುವಟಿಕೆಗಳ ಕಾರ್ಯಕ್ರಮಕ್ಕೆ ಬಳಸಲು ಸಭೆಯು ಒಮ್ಮತದಿಂದ ಅನುಮೋದಿಸಿತು. ಮುಂದುವರೆದು, ಸದರಿ ವಿಷಯವನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಗ್ರಂಥಾಲಯ ವಿಭಾಗ – 44 | |
|---|---|
| ವಿಷಯ ಸಂಖ್ಯೆ: | ಸಿಂ.09(a)/(11/24) |

# –: ಟಿಪ್ಪಣಿ :–

**ವಿಷಯಃ ದಿನಾಂಕ:16.11.2024 ರಂದು ನಡೆದ ಗ್ರಂಥಾಲಯದ ಸಲಹಾ ಸಮಿತಿ ನಡಾವಳಿಗಳ ಅನುಮೋದನೆ ಕುರಿತು.**

*********

ದಾವಣಗೆರೆ ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯದಲ್ಲಿ ದಿನಾಂಕ:16.11.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಗ್ರಂಥಾಲಯದ ಅಭಿವೃದ್ಧಿಗಾಗಿ ಸಲಹಾ ಸಮಿತಿಯನ್ನು ಏರ್ಪಡಿಸಲಾಗಿತ್ತು. ಸದರಿ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸಿದ ಸಭಾ ನಡಾವಳಿಗಳನ್ನು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

**:: ನಿರ್ಣಯ ::**

ದಾವಣಗೆರೆ ವಿಶ್ವವಿದ್ಯಾನಿಲಯದ ಕೇಂದ್ರ ಗ್ರಂಥಾಲಯದಲ್ಲಿ ದಿನಾಂಕ:16.11.2024 ರಂದು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಗ್ರಂಥಾಲಯದ ಅಭಿವೃದ್ಧಿಗಾಗಿ ಏರ್ಪಡಿಸಲಾದ ಸಲಹಾ ಸಮಿತಿಯಲ್ಲಿ ಚರ್ಚಿಸಿ ನಿರ್ಣಯಿಸಲಾದ ವಿಷಯಗಳ ಕುರಿತು ಕೂಲಂಕುಷವಾಗಿ ಚರ್ಚಿಸಿದ ನಂತರ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು

ಕುಲಪತಿಗಳು

| ದೃಶ್ಯಕಲಾ ಮಹಾವಿದ್ಯಾಲಯ – 45 | |
|---|---|
| ವಿಷಯ ಸಂಖ್ಯೆ: | ಸಿಂ.10(a)/(11/24) |

## –: ಟಿಪ್ಪಣಿ :–

**ವಿಷಯಃ ದಿನಾಂಕ:22.10.2024 ರಂದು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆದ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಅನುಮೋದಿಸುವ ಕುರಿತು.**

*********

ದಿನಾಂಕ:22.10.2024ರಂದು ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ನಡೆದ ಸಲಹಾ ಸಮಿತಿಯಲ್ಲಿ ಈ ಕೆಳಕಂಡ ವಿಷಯ ಸೂಚಿಯ ಕುರಿತು ಚರ್ಚಿಸಿ ನಿರ್ಣಯಿಸಲಾದ ಸಭೆಯ ನಡಾವಳಿಗಳನ್ನು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

1. ಬಯಲು ರಂಗಮಂದಿರ ಬಾಡಿಗೆ ಕುರಿತು.
2. ಥೀಮ್ ಪಾರ್ಕ್‌ನ ಪ್ರವೇಶ ಶುಲ್ಕದ ಕುರಿತು.
3. ಸಭಾಂಗಣದ ಬಾಡಿಗೆ ಕುರಿತು.
4. ಬಯಲು ರಂಗಮಂದಿರ ಮತ್ತು ಥೀಮ್ ಪಾರ್ಕ್‌ನಲ್ಲಿ ಕಾರ್ಯನಿರ್ವಹಣೆಯ ಸಿಬ್ಬಂದಿ ಕುರಿತು.

### :: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ದಿ:22.10.2024ರಂದು ನಡೆದ ಸಲಹಾ ಸಮಿತಿಯಲ್ಲಿ ಈ ಮೇಲ್ಕಂಡ ವಿಷಯಗಳ ಕುರಿತು ಚರ್ಚಿಸಿ ನಿರ್ಣಯಿಸಲಾದ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು | ಕುಲಪತಿಗಳು

| ಸರ್ವಜ್ಞ ಅಧ್ಯಯನ ಕೇಂದ್ರ – 46 | |
|---|---|
| ವಿಷಯ ಸಂಖ್ಯೆ: | ಸಿಂ.11(a)/(11/24) |

## –ಃ ಟಿಪ್ಪಣಿ ಃ–

ವಿಷಯಃ **ದಿನಾಂಕ:22.11.2024 ರಂದು ನಡೆದ ಸರ್ವಜ್ಞನ ಅಧ್ಯಯನ ಕೇಂದ್ರದ ಸಲಹಾ ಸಮಿತಿ ಸಭೆಯ ನಡಾವಳಿಗಳ ಅನುಮೋದನೆ ಕುರಿತು.**

*********

ದಿನಾಂಕ:22.10.2024ರಂದು ವಿಶ್ವವಿದ್ಯಾಲಯದಲ್ಲಿ ನಡೆದ ಸರ್ವಜ್ಞನ ಅಧ್ಯಯನ ಕೇಂದ್ರದ ಸಲಹಾ ಸಮಿತಿಯಲ್ಲಿ ಈ ಕೆಳಕಂಡ ವಿಷಯ ಸೂಚಿಯ ಕುರಿತು ಚರ್ಚಿಸಿ ನಿರ್ಣಯಿಸಲಾದ ಸಭೆಯ ನಡಾವಳಿಗಳನ್ನು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

1. ಸರ್ವಜ್ಞನ ಜಯಂತಿ ಕಾರ್ಯಕ್ರಮ ಆಚರಿಸುವ ಕುರಿತು.
2. ಸರ್ವಜ್ಞ ಅಧ್ಯಯನ ಕೇಂದ್ರದ ಕಛೇರಿಗೆ ಪೀಠೋಪಕರಣಗಳು, ಗಣಕಯಂತ್ರ, ಪ್ರಿಂಟರ್, ಉಪಕರಣಗಳು ಮತ್ತು ಪರಿಕರಗಳನ್ನು ಖರೀದಿಸುವ ಕುರಿತು.
3. ಸರ್ವಜ್ಞ ಅಧ್ಯಯನ ಕೇಂದ್ರ ವತಿಯಿಂದ ಗ್ರಂಥಾಲಯ ಸ್ಥಾಪನೆ ಮತ್ತು ಗ್ರಂಥಾಲಯಕ್ಕೆ ಪೀಠೋಕರಣಗಳು, ಪರಿಕರಗಳನ್ನು ಖರೀದಿಸುವ ಕುರಿತು.
4. ಸರ್ವಜ್ಞರ ಕುರಿತಾದ ರಾಜ್ಯ/ ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ ನಡೆಸುವ ಕುರಿತು.
5. ಸರ್ವಜ್ಞನ ತ್ರಿಪದಿಗಳ ಇಂಗ್ಲೀಷ್ ಅನುವಾದ ಮತ್ತು ಪ್ರಕಟಣೆ ಕುರಿತು.
6. ವಿಶ್ವವಿದ್ಯಾನಿಲಯದ ಆವರಣದಲ್ಲಿ ಸರ್ವಜ್ಞನ ತ್ರಿಪದಿಗಳ ಕುರಿತು ನಾಮಫಲಕಗಳನ್ನು ಅಳವಡಿಸುವ ಕುರಿತು.
7. ಸರ್ವಜ್ಞರವರ ಕುರಿತಾದ ವಿಶ್ವಕೋಶ ರಚನೆಯ ಕುರಿತು ಹಾಗೂ
8. ವಿಶ್ವವಿದ್ಯಾನಿಲಯದ ವ್ಯಾಪ್ತಿಯ ಸಂಲಗ್ನಗೊಂಡ ಕಾಲೇಜುಗಳಲ್ಲಿ ಸರ್ವಜ್ಞನ ಕುರಿತಾದ ಪ್ರಬಂಧ ರಚನೆ, ಚರ್ಚಾ ಸ್ಪರ್ಧೆ, ವಚನಗಳ ಗಾಯನ ಮತ್ತು ರಸ ಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಳ್ಳುವುದು ಹಾಗೂ ಭಾಗವಹಿಸಿದ ಸ್ಪರ್ಧಿಗಳಿಗೆ ಪ್ರಮಾಣ ಪತ್ರ ಮತ್ತು ಬಹುಮಾನ ವಿತರಣೆಯ ಕುರಿತು.

:: ನಿರ್ಣಯ ::

ದಿನಾಂಕ:22.10.2024ರಂದು ನಡೆದ ಸರ್ವಜ್ಞನ ಅಧ್ಯಯನ ಕೇಂದ್ರದ ಸಲಹಾ ಸಮಿತಿಯಲ್ಲಿ ಈ ಮೇಲ್ಕಂಡ ವಿಷಯಗಳ ಕುರಿತು ಚರ್ಚಿಸಿ ನಿರ್ಣಯಿಸಲಾದ ಸಭೆಯ ನಡಾವಳಿಗಳನ್ನು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕುಲಸಚಿವರು ಕುಲಪತಿಗಳು

"ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಿದ ವಿಷಯಗಳು"

| ಕಾಲೇಜು ಅಭಿವೃದ್ಧಿ ಪರಿಷತ್ತು – 47 | |
|---|---|
| ವಿಷಯ ಸಂಖ್ಯೆ: | ಸಿಂ.07(f)/(11/24) |

## –: ಟಿಪ್ಪಣಿ :–

ವಿಷಯಃ **2025–26ನೇ ಶೈಕ್ಷಣಿಕ ಸಾಲಿಗೆ ಈಗಾಗಲೇ ಶಾಶ್ವತ ಸಂಯೋಜನೆಯುಳ್ಳ ಕೋರ್ಸುಗಳು/ಪದವಿಗಳ ಹಾಗೂ ಕೆಲವು ಮುಂದುವರಿಕೆ ಸಂಯೋಜನೆ ಹೊಂದಿರುವ ಕೋರ್ಸುಗಳು/ ಪದವಿಗಳಿಗೆ ಯುಯುಸಿಎಂಎಸ್ ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸುವ ಕುರಿತು.**

ಉಲ್ಲೇಖ: 1. ಸರ್ಕಾರದ ಆದೇಶ ಸಂ;ಇಡಿ 212 ಯುಎನ್ಇ 2024, ದಿನಾಂಕ:04.10.2024.
2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ದಾವಿವಿ/ಸಿಡಿಸಿ/ ಸಂಯೋ–149/2024–25/2598 ದಿನಾಂಕ:22.10.2024

*********

ಸರ್ಕಾರದ ನಿರ್ದೇಶಾನುಸಾರ ಹಾಗೂ ಕರ್ನಾಟಕ ವಿಶ್ವವಿದ್ಯಾನಿಲಯಗಳ ಕಾಯ್ದೆ, 2000, ಸೆಕ್ಷನ್ (59)ರನ್ವಯ, ವಿಶ್ವವಿದ್ಯಾನಿಲಯ ವ್ಯಾಪ್ತಿಯಲ್ಲಿ ಬರುವ ಸ್ನಾತಕ/ಸ್ನಾತಕೋತ್ತರ/ಬಿ.ಇಡಿ./ಬಿ.ಪಿ.ಇಡಿ ಪದವಿ ಕಾಲೇಜುಗಳ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗಿರುತ್ತದೆ.

ವಿಶ್ವವಿದ್ಯಾನಿಲಯ ವ್ಯಾಪ್ತಿಯ ಕೆಲವು ಕಾಲೇಜುಗಳು ಶಾಶ್ವತ ಸಂಯೋಜನೆ ಹೊಂದಿದ್ದು, 2024–25ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ಶಿಕ್ಷಣ ನೀತಿ (SEP) ಅನುಷ್ಠಾನದಡಿ UUCMS ತಂತ್ರಾಂಶದಲ್ಲಿ College Admin ನ SEP Request ನೀಡುವಾಗ ಪದವಿ/ಕೋರ್ಸ್‌ಗಳನ್ನು ತಪ್ಪಾಗಿ ನಮೂದಿಸಿದ್ದರು. ಮುಂದುವರಿದು, ಪ್ರಸ್ತುತ 2025–26ನೇ ಶೈಕ್ಷಣಿಕ ಸಾಲಿಗೆ ಸದರಿ ಕೋರ್ಸ್‌ಗಳ ವಿವರಗಳನ್ನು UUCMS ತಂತ್ರಾಂಶದಲ್ಲಿ ಸರಿಪಡಿಸಿಕೊಡುವಂತೆ UUCMS ನಿರ್ವಾಹಕರಿಗೆ ಪತ್ರಿಸಲಾಗಿದೆ.

ಈ ಕುರಿತು UUCMS ಅಧಿಕಾರಿಗಳು, ಮೌಖಿಕವಾಗಿ ಸೂಚಿಸಿರುವಂತೆ – UUCMS ತಂತ್ರಾಂಶದಲ್ಲಿ ಸರಿಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪೂರ್ವದಲ್ಲಿ ವಿಶ್ವವಿದ್ಯಾನಿಲಯದ ಪ್ರಾಧಿಕಾರಗಳ ಅನುಮೋದನೆ ಪಡೆದು ಸದರಿ ಕಾಲೇಜುಗಳ ಶಾಶ್ವತ ಕೋರ್ಸುಗಳಿಗೆ ಈಗಾಗಲೇ ಶಾಶ್ವತ ಸಂಯೋಜನೆ ಆದೇಶಗಳು ಇರುವುದರಿಂದ ಯಾವುದೇ ಶುಲ್ಕ ಪಾವತಿಸಿಕೊಳ್ಳದೇ 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ಅರ್ಜಿ ಸಲ್ಲಿಸುವಾಗ ಶಾಶ್ವತವೆಂದು ನಮೂದಿಸಿ ಸಲ್ಲಿಸಲು ತಿಳಿಸಿರುತ್ತಾರೆ. ಈ ಕುರಿತು ದಿನಾಂಕಃ30.11.2024 ರಂದು ಏರ್ಪಡಿಸಲಾಗಿರುವ ಸಿಂಡಿಕೇಟ್ ಸಾಮಾನ್ಯ ಸಭೆಯ ಅವಗಾಹನೆಗೆ ಹಾಗೂ ಅನುಮೋದನೆಗಾಗಿ ಮಂಡಿಸಿದೆ.

:: ನಿರ್ಣಯ ::

ದಾವಣಗೆರೆ ವಿಶ್ವವಿದ್ಯಾನಿಲಯದ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ ಪದವಿ/ ಕೋರ್ಸ್‌ಗಳ ವಿವರಗಳನ್ನು ತಪ್ಪಾಗಿ ನಮೂದಿಸಿರುವ ಕಾಲೇಜುಗಳ ಮಾಹಿತಿಯನ್ನು UUCMS ತಂತ್ರಾಂಶದಲ್ಲಿ ಸರಿಪಡಿಸುವಂತೆ UUCMS ಅಧಿಕಾರಿಗಳಿಗೆ ಪತ್ರಿಸಲು ಸಭೆಯು ಒಮ್ಮತದಿಂದ ಅನುಮೋದಿಸಿತು.

ಕೊನೆಯಲ್ಲಿ ಕುಲಸಚಿವರು (ಆಡಳಿತ, ಪ್ರಭಾರೆ) ಇವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಲಸಚಿವರು　　　　ಕುಲಪತಿಗಳು